# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

| ಸಂಘದ ಸದಸ್ಯರಾಗಿ | | |
|---|---|---|
| ಮಹಾ ಪೋಷಕರು | – ₹ | 25,000/– |
| ಪೋಷಕರು | – ₹ | 5,000/– |
| ಸದಸ್ಯತ್ವ | – ₹ | 1,000/– |
| ವಾರ್ಷಿಕ ನಿರ್ವಹಣೆ | – ₹ | 500/– |

ಸಂಪುಟ : 13 ಸಂಚಿಕೆ : 3 ಖಾಸಗಿ ಪ್ರಸಾರಕ್ಕಾಗಿ ಸೆಪ್ಟೆಂಬರ್–ಡಿಸೆಂಬರ್ 2022

E-mail : queries@mmdbs.in magazines@mmdbs.in web : www.mmdbs.in

## ಗಿರಿಜಾ ಕಲ್ಯಾಣ ವಿಶೇಷಾಂಕ



## ಅಧ್ಯಕ್ಷರ ನುಡಿ



ಸಂಘದ ಸದಸ್ಯರಿಗೆಲ್ಲ ನಮಸ್ಕಾರಗಳು.

ಬೃಹಚ್ಚರಣದ ನೂತನ ಸಂಚಿಕೆ ನಿಮ್ಮ ಕೈ ಸೇರಿದೆ. ಈ ಸಂಚಿಕೆಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ನಮ್ಮೊಡನೆ ಹಂಚಿಕೊಳ್ಳಬೇಕೆಂದು ಕೋರುತ್ತೇನೆ. ಎಲ್ಲರಿಗೂ ಒಳ್ಳೆಯದಾಗಲಿ!

– ಬಿ. ಸುಬ್ರಹ್ಮಣ್ಯಂ, ಅಧ್ಯಕ್ಷರು

## ಸಂಪಾದಕೀಯ

ಸಮುದಾಯದವರಿಗೆಲ್ಲಾ ನಮಸ್ಕಾರ. ದಯವಿಟ್ಟು ಪತ್ರಿಕೆಗೆ ತಮ್ಮ ಸ್ವಂತ ಬರವಣಿಗೆಯ ಲೇಖನಗಳನ್ನು ಕಳುಹಿಸಬೇಕೆಂದು ವಿನಂತಿ.

ಒಂದು ಚಿಂತನೆ....... ನಮಗೆ ಈಗ ದೊರಕಿರುವ ಮನುಷ್ಯ ಜನ್ಮ ಆನಂದವಾಗಿದೆಯೇ? ನಮ್ಮ ವೈಯಕ್ತಿಕ ಆಸೆಗಳಿಗೆ ಕಾರಣ ಅಗತ್ಯವೇ? ಬೇಕುಗಳೇ? ಅಥವಾ ಐಷಾರಾಮಿಯೇ? ಎಂದು ಪ್ರಾಮಾಣಿಕವಾಗಿ ಯೋಚಿಸಬೇಕು. ಯಾವುದೂ ತಪ್ಪಲ್ಲ. ಆಯ್ಕೆಯು ನಮ್ಮದೇ. ಶ್ರೀಮದ್ಭಗವದ್ಗೀತೆಯ ಐದನೆಯ ಅಧ್ಯಾಯದ 15ನೇ ಶ್ಲೋಕ, "ನಾದತ್ತೆ ಕಸ್ಯಚಿತ್ ಪಾಪಂ ನ ಚೈವ ಸುಕೃತಂ ವಿಭುಃ" ಎಂದು ತಿಳಿಸಿರುವಂತೆ ನಮ್ಮ ಎಲ್ಲಾ ಸುಖ–ದುಃಖಗಳಿಗೆ ನಾವೇ ಕಾರಣ ಹೊರತು ಭಗವಂತ ಅಥವಾ ಬೇರೆ ವ್ಯಕ್ತಿಗಳಲ್ಲ. ನಿಮ್ಮ ಅಭಿಪ್ರಾಯಗಳನ್ನು ಲೇಖನದ ಮೂಲಕ ಪ್ರಚುರಪಡಿಸಬೇಕೆಂದು ನನ್ನ ಕೋರಿಕೆ.



– ಆರ್. ರಮೇಶ್, ಸಂಪಾದಕರು

## ಕಾರ್ಯದರ್ಶಿ ನುಡಿ

ಪ್ರಿಯ ಸದಸ್ಯರೆ,

ದಿನಾಂಕ ನವೆಂಬರ್ 27, 2022ರಂದು ನಡೆದ ಗಿರಿಜಾ ಕಲ್ಯಾಣಕ್ಕೆ ತಾವುಗಳು ನೀಡಿದ ತಮ್ಮ ತನು, ಮನ, ಧನ ಸಹಕಾರಕ್ಕೆ ಕೃತಜ್ಞತಾಪೂರ್ವಕ ಧನ್ಯವಾದಗಳು.

ಮೊದಲ ಬಾರಿಗೆ ಸಂಘದ ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚಿನ ಸದಸ್ಯರು ಭಾಗವಹಿಸಿದ್ದು ಸಮಿತಿಯ ಕಾರ್ಯನಿರ್ವಹಣೆಯ ಬಗ್ಗೆ ತಮ್ಮ ಮೆಚ್ಚುಗೆಯ ದ್ಯೋತಕ ಎಂದು ಭಾವಿಸುತ್ತೇನೆ. ಇದರಿಂದ ಸಂಘವು ಮುಂದೆ ಇನ್ನೂ ಹೆಚ್ಚಿನ ಆಸಕ್ತಿಯಿಂದ ಕಾರ್ಯನಿರ್ವಹಿಸುವುದಕ್ಕೆ ಉತ್ತೇಜನ ದೊರಕಿದಂತಾಗಿದೆ.

ಇದೇ ಸಂದರ್ಭದಲ್ಲಿ 50 ವರ್ಷ ದಾಂಪತ್ಯ ಜೀವನ ಪೂರೈಸಿದ ದಂಪತಿಗಳನ್ನು ಸಹ ಗೌರವಿಸಲಾಯಿತು.

ನಿಮ್ಮೆಲ್ಲರಿಗೂ ವ್ಯಾವಹಾರಿಕ ಹೊಸ ವರ್ಷ ಮತ್ತು ಮುಂಬರುವ ಹಬ್ಬಗಳಿಗೆ ಹಾರ್ಧಿಕ ಶುಭಾಶಯಗಳು.

ಈ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿಯಂದು (ಫೆಬ್ರವರಿ 24, 2023ರ ಶುಕ್ರವಾರದಂದು) ನಡೆಯುವ ನಾಗಾರಾಧನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಕುಟುಂಬ ಸಮೇತ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.



– ಎಸ್.ಸಿ. ಶ್ರೀನಿವಾಸ, ಕಾರ್ಯದರ್ಶಿ

## ಕೃತಜ್ಞತೆಗಳು



ಸಂಘದ ಸದಸ್ಯರಾದ ಶ್ರೀಯುತ ಕಲ್ಯಾಣರಾಮನ್, ಶೇಷಾದ್ರಿ ವಾಸು ಮತ್ತು ಅವರ ಸಹೋದರಿ ಶ್ರೀಮತಿ ಶಾರದಮಣಿ ಕುಟುಂಬದವರು ಅವರ ತಾಯಿ ದಿವಂಗತ ಸುಶೀಲಮ್ಮ ಅವರ ಸವಿನೆನಪಿಗಾಗಿ ಸಮಾಜಕ್ಕೆ ಅವರೆಡೆಯಿಂದ ಸಣ್ಣ ಅನುಕೂಲವಾಗಲೆಂಬ ಉದ್ದೇಶದಿಂದ ರೂ. 50,000/–ಗಳನ್ನು ಬೃಹಚ್ಚರಣ ಸಂಘಕ್ಕೆ ನೀಡಿದ್ದಾರೆ.

ಸಂಘವು ಈ ಕುಟುಂಬದವರ ಉದಾರ ಕೊಡುಗೆಗಾಗಿ ಧನ್ಯವಾದಪೂರ್ವಕ ನಮಸ್ಕಾರಗಳನ್ನು ತಿಳಿಸುತ್ತದೆ.

# ವಾರ್ತಾ ಚಿತ್ರ

ಸಂಘದ ಸದಸ್ಯ ಶ್ರೀ ಡಿ.ಎಸ್.ಗೋವಿಂದರಾಜುರವರ ಪೂರ್ವಿಕರಿಂದ ದೊಮ್ಮಸಂದ್ರದಲ್ಲಿ ಸ್ಥಾಪಿತವಾದ ಶ್ರೀ ಕಾಶೀ ವಿಶ್ವನಾಥೇಶ್ವರ ದೇವಸ್ಥಾನದ ದಸರಾ ಉತ್ಸವ ಸಮಯದಲ್ಲಿನ ಪೂಜಾ ವಿಧಾನಗಳನ್ನು ಟಿ.ಟಿ.ಡಿ ಟಿವಿಯಲ್ಲಿ ಪ್ರಸಾರ ಮಾಡಲಾಗಿತ್ತು.





* ಸದಸ್ಯ ಶ್ರೀ ಎನ್. ಶ್ರೀನಿವಾಸ್‌ರವರಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಉತ್ತಮ ಶಿಕ್ಷಕ ಪ್ರಶಸ್ತಿ ದೊರಕಿದೆ.

* ಸದಸ್ಯ ವಿದ್ವಾನ್ ಶ್ರೀ ಎನ್. ಶ್ರೀನಿವಾಸರವರಿಗೆ ಜನಸಿರಿ ಸಂಸ್ಥೆಯು "ಗಾನ ಸಂಭ್ರಮ 2022" ಕಾರ್ಯಕ್ರಮದ ಅಂಗವಾಗಿ ದಿನಾಂಕ 27.8.2022ರಂದು ಬೆಂಗಳೂರಿನಲ್ಲಿ "ಸಂಗೀತ ಸೇವಾ ರತ್ನ ಪ್ರಶಸ್ತಿ" ನೀಡಿ ಗೌರವಿಸಲಾಯಿತು.

ಹಿರಿಯ ಸದಸ್ಯ, ಬೃಹಚ್ಚರಣ ಪತ್ರಿಕೆಯ ಹಿಂದಿನ ಸಂಪಾದಕ ಮಂಡಳಿಯ ಸದಸ್ಯ ಹಾಗೂ ಹಿರಿಯ ಪತ್ರಕರ್ತರಾದ ಶ್ರೀ ವೈ.ಜಿ. ಗಿರಿಶಾಸ್ತ್ರಿರವರನ್ನು ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ದಿನಾಂಕ 7.9.2022ರಂದು ಬೆಂಗಳೂರಿನಲ್ಲಿ ಸನ್ಮಾನಿಸಿತು.





ದೆಹಲಿಯ ಕನ್ನಡ ಶಾಲೆಗೆ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಗುರುಗಳಾದ ಶ್ರೀ ಶಂಕರಾನಂದ ಭಾರತಿಗಳನ್ನು ಆಹ್ವಾನಿಸಿದ್ದ ಸಂದರ್ಭದಲ್ಲಿ ಕನ್ನಡ ಶಾಲೆಗಾಗಿ ಸ್ವಯಂ ಸೇವೆ ಸಲ್ಲಿಸುತ್ತಿರುವ ಸಂಘದ ಸದಸ್ಯ ಡಾ. ಎಂ.ಎಸ್. ಶಶಿಕುಮಾರ್ ಮತ್ತು ಅವರ ಕುಟುಂಬದವರು ಗುರುಗಳಿಂದ ಆಶೀರ್ವಾದ ಪಡೆದರು.

ಸಂಘದ ಪೋಷಕರಾದ ಶ್ರೀ ಆರ್.ಎಸ್.ರಮೇಶ್‌ರವರು 60 ವಸಂತಗಳನ್ನು ಪೂರೈಸಿದ ಸಂದರ್ಭ.





ಬಿ.ಟಿ.ಎಂ ಲೇಔಟ್‌ನ ಶ್ರೀ ವಿನಾಯಕ ದೇವಸ್ಥಾನದಲ್ಲಿ ಸದಸ್ಯೆ ಶ್ರೀಮತಿ ಪ್ರಭಾವತಿ ರಾಮಕೃಷ್ಣರವರ ಪುತ್ರಿ ಕು. ವಾಣಿಶ್ರೀ ರಾಮಕೃಷ್ಣ ಮತ್ತು ಅವರ ತಂಡದವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸಂಘದ ಸದಸ್ಯ ಶ್ರೀ ಪದ್ಮನಾಭನ್‌ರವರು ದಿನಾಂಕ 27.11.2022ರಂದು ತಮ್ಮ ಗೃಹದಲ್ಲಿ ಲೋಕಕಲ್ಯಾಣಕ್ಕಾಗಿ ಸಾಮೂಹಿಕ "ಶ್ರೀ ಲಲಿತಾ ಸಹಸ್ರನಾಮ" ಪಾರಾಯಣವನ್ನು ನೆರವೇರಿಸಿದರು.



## ಮೈ.ಮಂ.ದ್ರಾ. ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)

**ನೂತನ ಕಾರ್ಯಕಾರಿ ಸಮಿತಿ**

ಶ್ರೀಯುತರುಗಳಾದ

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿ

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹಖಜಾಂಚಿ

**ಆರ್. ಗಣೇಶ್ ಶ್ರೀಧರ್, 9880187686**
ಆಂತರಿಕ ಲೆಕ್ಕ ಪರಿಶೋಧಕರು

**<u>ಸದಸ್ಯರು</u>**

**ಜಿ.ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಸರಸ್ವತೀ ನಟರಾಜನ್, 9480619730**
**ನಾಗೇಶ, 9980662118**
**ಕೆ.ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್.ಎ. ಶ್ಯಾಮಸುಂದರ್, 9845205674**
**ಆರ್. ರಮೇಶ್, 9886034048**
**ಲಲಿತಾ ರಮೇಶ್, 9945199637**
**ಬಿ.ಆರ್. ಅನಿಲ್ ರಮೇಶ್, 9980027189**
**ಬಿ.ಸಿ. ನಟರಾಜ, 9980183181**

<u>ಲೆಕ್ಕಪರಿಶೋಧಕರು</u>

**ಬಿ.ಎನ್. ಗೋವಿಂದ್ ಪ್ರಸಾದ್, 9845128229**

**'ಬೃಹಚ್ಚರಣ' ಪತ್ರಿಕೆಯ ಸಂಪಾದಕ ಮಂಡಳಿ**
ಸಂಘದ **ಅಧ್ಯಕ್ಷರು ಹಾಗೂ ಕಾರ್ಯದರ್ಶಿ**

**ಆರ್. ರಮೇಶ್, 9886034048**
ಸಂಪಾದಕರು

**ಲಲಿತಾ ರಮೇಶ್, 9945199637**
ಸದಸ್ಯರು

**ಬಿ.ಆರ್. ಅನಿಲ್ ರಮೇಶ್, 9980027189**
ಸದಸ್ಯರು

**ಎನ್. ಶಿವಕುಮಾರ್, 9886505505**
ಛಾಯಾಗ್ರಾಹಕರು

## ಧನ್ಯವಾದಗಳು



ಸಂಘವು ಪ್ರಥಮ ಬಾರಿಗೆ ಗಿರಿಜಾ ಕಲ್ಯಾಣೋತ್ಸವವನ್ನು ಯಶಸ್ವಿಯಾಗಿ ನಡೆಸಿತು. ಈ ಕಲ್ಯಾಣೋತ್ಸವದಲ್ಲಿ ಸಂಘದ ಸದಸ್ಯರು ಹಾಗೂ ಅವರ ಕುಟುಂಬ ವರ್ಗದವರು ನಮ್ಮ ನಿರೀಕ್ಷೆಗೆ ಮೀರಿದ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಸಮಾರಂಭದ ಸಂಭ್ರಮ, ಸಡಗರಗಳನ್ನು ಪಸರಿಸಿದ ಈ ಕಲ್ಯಾಣೋತ್ಸವದ ಶಾಸ್ತ್ರೋಕ್ತ ವಿಧಿಗಳು ಸದಸ್ಯರೆಲ್ಲರ ಮೆಚ್ಚುಗೆ ಗಳಿಸಿದವು. ಸದಸ್ಯರ, ಸಮುದಾಯದವರ ಕುಟುಂಬವರ್ಗದವರು ಮತ್ತು ಸಂಘದ ಹಿತೈಷಿಗಳು ಕಲ್ಯಾಣವನ್ನು ವೀಕ್ಷಿಸಿ, ಮಹಾ ಪ್ರಸಾದವನ್ನು ಸೇವಿಸಿ ಧನ್ಯರಾದರು.

ಅಂದಿನ ವಿಶೇಷವೆಂದರೆ ನಮ್ಮ ಸಮುದಾಯದಲ್ಲಿ ಐವತ್ತು ವರ್ಷಗಳ ದಾಂಪತ್ಯ ಜೀವನವನ್ನು ಪೂರೈಸಿದ ಹಿರಿಯ ದಂಪತಿಗಳನ್ನು ಗೌರವಿಸಲಾಯಿತು.

ನಮ್ಮ ಸಮುದಾಯದ ಮಹಿಳಾ ಸದಸ್ಯರು ನಮ್ಮ ಮನವಿಯನ್ನು ಮನ್ನಿಸಿ ಈ ಕಲ್ಯಾಣೋತ್ಸವದಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ್ದು, ಈ ಸದಸ್ಯರ ಕಾರ್ಯನಿರ್ವಹಣೆ ಕಾರ್ಯಕ್ರಮವು ಯಶಸ್ವಿಯಾಗುವಲ್ಲಿ ಬಹಳಷ್ಟು ನೆರವಾಯಿತು. ನಮ್ಮ ನಿರೀಕ್ಷೆಯನ್ನು ಮೀರಿ ತನು, ಮನ, ಧನ ಸಹಾಯ ನೀಡುವ ಮೂಲಕ ಸಂಘದ ಈ ಕಾರ್ಯಕ್ರಮವನ್ನು ಸದಸ್ಯರು ಮತ್ತು ಅವರ ಕುಟುಂಬವರ್ಗದವರು ಪ್ರೋತ್ಸಾಹಿಸಿದರು.

ಅಂದು ಗಿರಿಜಾ ಕಲ್ಯಾಣೋತ್ಸವವನ್ನು ನೆರವೇರಿಸಿ ಕೊಟ್ಟ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಅರ್ಚಕ ವರ್ಗದವರಿಗೂ, ನಮ್ಮ ಮನವಿಯನ್ನು ಪುರಸ್ಕರಿಸಿ ಗಿರಿಜಾ ಕಲ್ಯಾಣ ಮಹೋತ್ಸವದಲ್ಲಿ ಪಾಲ್ಗೊಂಡ ಶ್ರೀ ಸೋಮಸುಂದರ ಮತ್ತು ಶ್ರೀ ಕೆ.ಸಿ. ನಟರಾಜನ್ ದಂಪತಿಗಳಿಗೂ, ನಮ್ಮ ಆಹ್ವಾನವನ್ನು ಮನ್ನಿಸಿ ಅಂದು ಉಪಸ್ಥಿತರಿದ್ದ ಐವತ್ತು ವರ್ಷಗಳ ದಾಂಪತ್ಯವನ್ನು ಪೂರೈಸಿದ ಎಲ್ಲ ದಂಪತಿಗಳಿಗೂ, ನಮ್ಮ ಮನವಿಗೆ ಸ್ಪಂದಿಸಿ ಈ ಕಲ್ಯಾಣೋತ್ಸವದಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ ಮಹಿಳಾ ಸದಸ್ಯರಿಗೂ ಮತ್ತು ಸಂಘದ ಈ ಕಾರ್ಯಕ್ರಮಕ್ಕೆ ನೆರವಾದ ಎಲ್ಲ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೂ, ಕಾರ್ಯಕಾರಿ ಸಮಿತಿಯು ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

**ಬಿ.ಸುಬ್ರಹ್ಮಣ್ಯಂ**
ಅಧ್ಯಕ್ಷರು

# ಗಿರಿಜಾ ಕಲ್ಯಾಣ ಮತ್ತು ಐವತ್ತು ವರ್ಷ ವೈವಾಹಿಕ ಜೀವನ ಪೂರೈಸಿದ ದಂಪತಿಗಳಿಗೆ ಗೌರವ

ಬೃಹಚ್ಚರಣ ಸಂಘವು ಸಮುದಾಯದವರ ಒಳಿತಿಗಾಗಿ ಮತ್ತು ಲೋಕಕಲ್ಯಾಣಕ್ಕಾಗಿ ದಿನಾಂಕ 27.11.2022ರ ಭಾನುವಾರದಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಸದನದಲ್ಲಿ "ಗಿರಿಜಾ ಕಲ್ಯಾಣ" ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಂಘದ ಸದಸ್ಯರು ಮತ್ತು ಸಮುದಾಯದವರು ಈ ಕಲ್ಯಾಣದಲ್ಲಿ ಬಹು ಭಕ್ತಿಭಾವ, ಉತ್ಸಾಹದಿಂದ ಪಾಲ್ಗೊಂಡರು. ಸರಿ ಸುಮಾರು 200 ಮಂದಿ ಕಲ್ಯಾಣಕ್ಕಾಗಿ ಸಂಕಲ್ಪಿಸಿದ್ದರು. ಬೆಳಿಗ್ಗೆ 9 ಘಂಟೆಗೆ ಶುಭ ಮಂಗಳವಾದನದೊಂದಿಗೆ ಗಿರಿಜಾ ಕಲ್ಯಾಣವು ಆರಂಭವಾಯಿತು. ಕ್ಷೇತ್ರ ದೇವತೆಗಳಾದ ಶ್ರೀ ಮಹಾಗಣಪತಿ, ಶ್ರೀ ಮಲ್ಲಿಕಾರ್ಜುನ, ಶ್ರೀ ಭ್ರಮರಾಂಬ ದೇವರುಗಳಿಗೆ ಅಭಿಷೇಕ, ಅಲಂಕಾರಗಳೂ ಈ ಹೊತ್ತಿಗೆ ನಡೆದಿದ್ದವು.

ಪುರೋಹಿತರಾದ ಶ್ರೀಯುತ ಸುಬ್ರಹ್ಮಣ್ಯ ಶರ್ಮ ಕಡೂರು, ಎಸ್.ವಿ. ಸುಬ್ರಹ್ಮಣ್ಯ ಶರ್ಮ ಮತ್ತು ಎಸ್.ವಿ. ಸುಧಾಕರ್ ಶರ್ಮ, ಕಲ್ಯಾಣ ಕೈಂಕರ್ಯಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಕಲ್ಯಾಣಕ್ಕೆ ಸಂಕಲ್ಪಿಸಿದ್ದವರ ಹೆಸರು, ಗೋತ್ರ, ನಕ್ಷತ್ರ, ರಾಶಿಗಳನ್ನು ಓದಿ ಸಂಕಲ್ಪ ಮಾಡಿದರು. ಇವರುಗಳಿಗೆ ಪ್ರಸಾದರೂಪವಾಗಿ ಕೊಡುವ ಶಿವಲಿಂಗಗಳನ್ನು, ವಿಭೂತಿಯನ್ನು ತಟ್ಟೆಯಲ್ಲಿಟ್ಟು ಅವುಗಳಿಗೂ ಪೂಜೆ ಸಲ್ಲಿಸಲಾಯಿತು.

ಗಿರಿಜಾ ಕಲ್ಯಾಣಕ್ಕೆ ಸಮುದಾಯದ ಹಿರಿಯರು ಮತ್ತು ಸಂಘದ ಹಿಂದಿನ ಅಧ್ಯಕ್ಷರಾದ ಶ್ರೀ ಎಸ್.ಸೋಮಸುಂದರ ಮತ್ತು ಶ್ರೀಮತಿ ಜಯಶ್ರೀ ಅವರು ವಧುವಾದ ಗಿರಿಜೆಯ ಕಡೆ ಹಾಗೂ ಬೃಹಚ್ಚರಣ ಪತ್ರಿಕೆಯ ಹಿಂದಿನ ಸಂಪಾದಕರಾದ ಶ್ರೀ ಕೆ.ಸಿ.ನಟರಾಜನ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜನ್ ಅವರು ವರನಾದ ಪರಮೇಶ್ವರನ ಕಡೆ ಕಲ್ಯಾಣದಲ್ಲಿ ಸಮುದಾಯದ ಪರವಾಗಿ ತಮ್ಮನ್ನು ತೊಡಗಿಸಿಗೊಂಡರು. ಆವರಣದಲ್ಲಿ ನೆರೆದಿದ್ದ ಸಮುದಾಯದವರು ತದೇಕಚಿತ್ತದಿಂದ ಗಿರಿಜಾ ಕಲ್ಯಾಣವನ್ನು ಕೈಲಾಸದಲ್ಲಿ ನಡೆಯುತ್ತಿದೆ ಎಂಬ ಭಾವದಿಂದ ವೀಕ್ಷಿಸುತ್ತಿದ್ದರು. ಪುರೋಹಿತರು ಎಲ್ಲಾ ಪೂಜಾ ಕಾರ್ಯಕ್ರಮಗಳನ್ನು ವೈದಿಕ ಮಂತ್ರ ಪೂರ್ವಕವಾಗಿ ಮಾಡುತ್ತಾ ಅವುಗಳ ಅರ್ಥವನ್ನು ಕನ್ನಡದಲ್ಲಿ ವಿವರಿಸುತ್ತಿದ್ದುದು ಇದಕ್ಕೆ ಕಾರಣವಾಗಿತ್ತು. ಮೊದಲು ವರನಾದ ಪರಮೇಶ್ವರನ ಆವಾಹನೆ, ಸ್ಥಾಪನೆ, ಮಂಗಳಾರತಿ ಆದ ಮೇಲೆ ಕಲ್ಯಾಣ ಮಂಟಪಕ್ಕೆ ವಧುವಾದ ಗಿರಿಜೆಯನ್ನು ಮಂಗಳ ವಾದ್ಯ ಮತ್ತು ಮೆರವಣಿಗೆಯ ಮೂಲಕ ಕರೆತಂದು ವಧು–ವರರನ್ನು ಎದುರು–ಬದುರಾಗಿ ಸ್ಥಾಪಿಸಿದರು. ನಂತರ ಸಮನ್ ಮಾಲೆ ಕಾರ್ಯಕ್ರಮ ನೆರವೇರಿಸಿದರು. ಧಾರೆ ಸಮಯದಲ್ಲಿ ಪರಮೇಶ್ವರ–ಗಿರಿಜೆಯ ಪ್ರವರಗಳನ್ನು ಪುರೋಹಿತರು ಹೇಳುತ್ತಿದ್ದಾಗ ಆವರಣದಲ್ಲಿ ನೆರೆದಿದ್ದ ಭಕ್ತರು ಮೂಕವಿಸ್ಮಿತರಾಗಿ ರೋಮಾಂಚನಗೊಂಡ ಅನುಭವವನ್ನು ಸಂಘದ ಕಾರ್ಯಕಾರಿ ಸಮಿತಿಯವರೊಂದಿಗೆ ಹಂಚಿಕೊಂಡರು. ಧಾರೆಯಾದ ನಂತರ ಮಾಂಗಲ್ಯ ಧಾರಣೆಗೆ ಮುಂಚೆ ಪುರೋಹಿತರು ಭಕ್ತಾದಿಗಳಿಗೆ ಮಾಂಗಲ್ಯದರ್ಶನ ಭಾಗ್ಯ ಕರುಣಿಸಿದರು. ಇದೇ ಸಮಯದಲ್ಲಿ ಮಂಗಳ ವಾದ್ಯದವರು ಪುರೋಹಿತರ ಸಲಹೆಯಂತೆ ಸಾಂದರ್ಭಿಕ ರಾಗಗಳನ್ನು ನುಡಿಸಿ ಭಗವಂತನಿಗೆ ತಮ್ಮ ಸಂಗೀತ ಸೇವೆಯನ್ನು ಸಮರ್ಪಿಸಿದರು. ನೆರೆದಿದ್ದ ಎಲ್ಲಾ ಭಕ್ತರು ತಮ್ಮ ತಮ್ಮ ಆಶಯಗಳನ್ನು ನಿವೇದಿಸಿಕೊಂಡು ನಮಸ್ಕರಿಸುತ್ತಿದ್ದರು.

ಮಾಂಗಲ್ಯ ಧಾರಣೆ ನಂತರ ವಿಶೇಷವಾಗಿ ವಧು–ವರರು ಚೆಂಡಾಟ ಆಡುವ ವಿಧಿ ಇರುತ್ತದೆ. ಇದು ಭಗವಂತನ ಲೀಲೆ ಎಂಬಂತೆ ವಿನೋದವಾಗಿ ಪೂರ್ಣಭಾವದಿಂದ ಪುರೋಹಿತರು ಪುಷ್ಪ ಮತ್ತು ತುಳಸಿಯಿಂದ ಮಾಡಿದ್ದ ಚೆಂಡಿನ ಮಾದರಿಯನ್ನು ನೆರೆದಿದ್ದ ಭಕ್ತರ ಕಡೆ ಎಸೆದು ಅವರು ಅದನ್ನು ಹಿಡಿಯುವಂತೆ ಮಾಡಿ ಆಟದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಈ ಘಳಿಗೆ ಗಿರಿಜಾ ಕಲ್ಯಾಣದ ಅವಿಸ್ಮರಣೀಯ ಅಂಗವಾಗಿತ್ತು. ನೆರೆದಿದ್ದವರಿಗೆ ತಾವು ಗಿರಿಜಾ ಮತ್ತು ಪರಮೇಶ್ವರರ ಸಾಕಾರ ಮೂರ್ತಿಯೊಂದಿಗೆ ಆಟವಾಡುತ್ತಿರುವಂತೆ ಭಾವಿಸಿಕೊಂಡು ಪುನೀತರಾದರು. ಬಂದಿದ್ದ ಸಮುದಾಯದವರು ತಮ್ಮ ಬಂಧು–ಬಾಂಧವರೊಂದಿಗೆ ಗಿರಿಜಾ–ಪರಮೇಶ್ವರರಿಗೆ ಭಕ್ತಿ ಭಾವದಿಂದ ನಮಸ್ಕರಿಸಿದರು. ನಂತರ ದೇವ ದಂಪತಿಗಳಿಗೆ ವೇದಿಕೆಯ ಮೇಲಿದ್ದ ಪುರೋಹಿತರು, ಸಮುದಾಯವನ್ನು ಪ್ರತಿನಿಧಿಸಿದ ದಂಪತಿಗಳು ಮತ್ತು ಇತರರು ಧನ್ಯತಾ ಪೂರ್ವಕವಾಗಿ ಸುಶ್ರಾವ್ಯವಾದ ವಾದ್ಯ ಮೇಳದ ಜೊತೆಗೆ ತಾಂಡವ ನೃತ್ಯ ಪ್ರಿಯನಾದ ಪಾರ್ವತಿ–ಪರಮೇಶ್ವರರಿಗೆ ತನ್ಮಯತೆಯಿಂದ ನೃತ್ಯ ಮಾಡುತ್ತಾ ಹೂಮಾಲೆ ಸಮರ್ಪಿಸಿದರು.

## ಗಿರಿಜಾ ಕಲ್ಯಾಣ ಮತ್ತು ಐವತ್ತು ವರ್ಷ ವೈವಾಹಿಕ ಜೀವನ ಪೂರೈಸಿದ ದಂಪತಿಗಳಿಗೆ ಗೌರವ

ಮಂಗಳಮಯವಾದ ಈ ಕಲ್ಯಾಣದ ನಂತರ ಭಕ್ತಾದಿಗಳು ಆದಿ ದಂಪತಿಗಳಾದ ಶಿವ-ಶಕ್ತಿಯರಿಗೆ ಕಲ್ಯಾಣದ ಕಾಣಿಕೆಗಳನ್ನು ಸಲ್ಲಿಸುವ ಸೌಭಾಗ್ಯ ಪಡೆದರು. ಗಿರಿಜಾ ಕಲ್ಯಾಣದ ಸಂಕಲ್ಪಕ್ಕೆ ಮತ್ತು ದಾನಿಗಳಿಗೆ ಪ್ರಸಾದ ರೂಪವಾಗಿ ಪೂಜೆಗೊಂಡ ಶಿವಲಿಂಗ, ವಿಭೂತಿ, ಶಲ್ಯ, ರವಿಕೆ ಕಣ, ನೈವೇದ್ಯಗೊಂಡ ತೆಂಗಿನಕಾಯಿ ಮತ್ತು ಹಣ್ಣುಗಳನ್ನು ಒಂದು ಚೀಲದಲ್ಲಿ ಹಾಕಿ ನೀಡಲಾಯಿತು. ಪ್ರಸಾದ ವಿತರಣೆ ಸಮಯದಲ್ಲಿ ಸಮುದಾಯದ ಮಹಿಳಾ ಸ್ವಯಂ ಸೇವಕರು ಅಚ್ಚುಕಟ್ಟಾಗಿ ಕಾರ್ಯ ನೆರವೇರಿಸಿದರು.

**ಗಿರಿಜಾ ಕಲ್ಯಾಣ**ದ ನಂತರ ಬೃಹಚ್ಚರಣ ಸಮುದಾಯದಲ್ಲಿ **50 ವರ್ಷ ದಾಂಪತ್ಯ ಜೀವನ** ಪೂರೈಸಿದ ದಂಪತಿಗಳಿಗೆ ಗೌರವ ಸಮರ್ಪಣೆ ಮಾಡುವ ಕಾರ್ಯಕ್ರಮವು ಪ್ರಾರಂಭವಾಯಿತು. ಆಗಮಿಸಿದ್ದ ಈ ದಂಪತಿಗಳನ್ನು ಮಂಗಳ ವಾದ್ಯದೊಂದಿಗೆ ಮೆರವಣಿಗೆಯಲ್ಲಿ ಸಭೆಗೆ ಪನ್ನೀರು ಸಿಂಪಡಿಸಿ, ಪುಷ್ಪಗಳನ್ನು ಹಾಕಿ ಹಾರ ಸಮೇತ ಕರೆತರಲಾಯಿತು. ಮೊದಲೇ ಹಿರಿಯ ದಂಪತಿಗಳು ಅವರಿಗಾಗಿ ಮೀಸಲಾಗಿದ್ದ ಆಸನಗಳನ್ನು ಅಲಂಕರಿಸಿದರು. ಶ್ರೀಮತಿ ಸುಷ್ಮಾ ರಘುನಂದನರವರು ದಂಪತಿಗಳ ವಿವರಗಳನ್ನು ಸಭೆಗೆ ತಿಳಿಸುತ್ತಾ ಆ ದಂಪತಿಗಳಿಗೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ದಂಪತಿ ಸಮೇತವಾಗಿ ಅರಿಶಿನ, ಕುಂಕುಮ, ಶಾಲು, ಹಾರ, ಒಂದು ಜೊತೆ ದೀಪ, ಪೂಜೆಗೊಂಡ ಶಿವಲಿಂಗ, ವಿಭೂತಿ, ದಂಪತಿಗಳ ಛಾಯಾಚಿತ್ರ ಮತ್ತು ವಿವಾಹದ ದಿನಾಂಕವಿರುವ ಕಿರುಪತ್ರವನ್ನು ನೀಡಿ ಗೌರವಿಸಿ ನಮಸ್ಕರಿಸಿದರು. ಆ ಹಿರಿಯ ದಂಪತಿಗಳು ಸಂತೋಷದಿಂದ ಶುಭ ಹಾರೈಸಿದರು. ಹಿರಿಯ ದಂಪತಿಗಳ ಕುಟುಂಬ ಸದಸ್ಯರು ಈ ಸುಂದರ ಕ್ಷಣಗಳನ್ನು ಕಣ್ತುಂಬಿಕೊಂಡು ಅವರೊಂದಿಗೆ ಛಾಯಾಚಿತ್ರ ತೆಗೆಸಿಕೊಂಡು ಸಂಭ್ರಮಿಸಿದರು.

ಈ ದಿನ ಸಂಪೂರ್ಣ ಕಾರ್ಯಕ್ರಮವನ್ನು ಶ್ರೀಮತಿ ಶುಭಗಾಯತ್ರಿಯವರು ನಿರೂಪಣೆ ಮಾಡಿದರು. ನಂತರ ಪ್ರಸಾದ ಭೋಜನ ಸಮಯದಲ್ಲಿ ಈ ಹಿರಿಯ ದಂಪತಿಗಳಿಗೆ ಮೊದಲು ಉಪಚಾರ ಮಾಡಿ ಬಡಿಸಲಾಯಿತು. ಸಮುದಾಯದವರು ಪ್ರಸಾದ ಭೋಜನ ಸಮಯದಲ್ಲಿ ಸಂಯಮದಿಂದಿದ್ದು ಸುಮಾರು 400ಕ್ಕೂ ಮಿಗಿಲಾದ ಭಕ್ತರು ಪ್ರಸಾದವನ್ನು ಸ್ವೀಕರಿಸಿದರು. ಸಂಘದ ವತಿಯಿಂದ ಸಿಹಿ ಮತ್ತು ಖಾರಾ ಪೊಟ್ಟಣಗಳನ್ನು ಈ ಸಮಯದಲ್ಲಿ ವಿತರಿಸಿಲಾಯಿತು. ಸಂಘದ ಮಹಾಪೋಷಕ, ಕಾರ್ಯಕಾರಿ ಸಮಿತಿಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್.ಮಣಿ ಮತ್ತು ಅವರ ಸಹೋದರ ಹಿರಿಯ ಸದಸ್ಯ ಕರ್ನಲ್ ರಾಜನ್‌ರವರು ತಮ್ಮ ದಿವಂಗತ ತಂದೆಯವರಾದ ಆರ್.ಎಸ್.ವೆಂಕಟಗಿರಿಯಪ್ಪನವರ ಶತಾಬ್ಧಿಯ ಸವಿನೆನಪಿನಲ್ಲಿ ಸಕ್ಕರೆ ಹೋಳಿಗೆಯನ್ನು ಪ್ರಾಯೋಜಿಸಿದರು.

**ದಸರಾ** ಸಮಯದಲ್ಲಿ ಸಮುದಾಯದವರು ತಮ್ಮ ಮನೆಗಳಲ್ಲಿ ಪ್ರದರ್ಶಿಸಿದ್ದ ಬೊಂಬೆಗಳ ಚಿತ್ರವನ್ನು ವೀಕ್ಷಿಸಿದ ಕಾರ್ಯಕಾರಿ ಸಮಿತಿಯವರು ಈ ಕಾರ್ಯವನ್ನು ಉತ್ತೇಜಿಸಲು ಸಂತೋಷವನ್ನು ಹಂಚಿಕೊಂಡ ಸದಸ್ಯರಿಗೆ ಮತ್ತು ಅವರ ಕುಟುಂಬದವರಿಗೆ ಒಂದು ಕಿರುಕಾಣಿಕೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಸುಬ್ರಹ್ಮಣ್ಯಂರವರು ಇದೇ ಸಂದರ್ಭದಲ್ಲಿ ನೀಡಿದರು.

**ಗಿರಿಜಾ ಕಲ್ಯಾಣ**ವು ಇಷ್ಟು ಭಕ್ತಿಭಾವದಿಂದ ಅಚ್ಚುಕಟ್ಟಾಗಿ ನೆರವೇರಲು ಸಮುದಾಯದವರು ತನು, ಮನ ಮತ್ತು ಧನ ನೀಡಿ ಸಹಕರಿಸಿದರು. ಈ ಕಾರ್ಯದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ.ಸುಬ್ರಹ್ಮಣ್ಯಂ, ಕಾರ್ಯದರ್ಶಿಗಳಾದ ಶ್ರೀ ಎಸ್.ಸಿ. ಶ್ರೀನಿವಾಸರವರು ಸಂದರ್ಭೋಚಿತ ಸಲಹೆ ನೀಡಿ ಕಾರ್ಯರೂಪಕ್ಕೆ ತರುವುದರಲ್ಲಿ ಕಾರ್ಯಕಾರಿ ಸಮಿತಿಯೊಂದಿಗೆ ಮಾರ್ಗದರ್ಶಕರಾಗಿ ಭಾಗಿಯಾಗಿದರು. ಈ ಕಲ್ಯಾಣವು ವಿಜೃಂಭಣೆಯಾಗಿ ಪಾಲ್ಗೊಂಡುವರ ಮನದಲ್ಲಿ ಚಿರವಾಗಿ ನಿಲ್ಲಲು ಸಹಕರಿಸಿದ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಪದಾಧಿಕಾರಿಗಳಾದ ಶ್ರೀಯುತರಾದ ರಾಜಣ್ಣ ಮತ್ತು ನಾರಾಯಣ್‌ರವರಿಗೆ ಧನ್ಯವಾದಗಳು. ಪ್ರಸಾದ ಭೋಜನವನ್ನು ರುಚಿಕರವಾಗಿ ತಯಾರಿಸಿ, ಸಾವಧಾನದಿಂದ ಪ್ರತಿ ಪಂಕ್ತಿಯಲ್ಲೂ ಉಣಬಡಿಸಿದ ದೇವಸ್ಥಾನದ ಬಾಣಸಿಗರಿಗೆ ವಿಶೇಷ ನಮಸ್ಕಾರಗಳು. ಕಲ್ಯಾಣದ ಹಿಂದಿನ ದಿನ ಪೂರ್ವ ತಯಾರಿಗೆ ಬಂದಿದ್ದ ಸಮುದಾಯದ ಮಹಿಳೆಯರಿಗೆ ಕಾರ್ಯಕಾರಿ ಸಮಿತಿಯ ಧನ್ಯವಾದಗಳು. ಗಿರಿಜಾ ಕಲ್ಯಾಣ ಕಾರ್ಯಕ್ರಮವು ಸತ್ಸಂಕಲ್ಪದಂತೆ ಸುಗಮವಾಗಿ ನಡೆದಿದ್ದು ಭಗವಂತನ ಪೂರ್ಣ ಅನುಗ್ರಹದಿಂದಲೇ ಎಂದು ಎಲ್ಲರಿಗೂ ಮನವರಿಕೆಯಾಯಿತು.



ಹೆಚ್.ಆರ್. ಲಲಿತಾ
9945199637

**ಸರ್ವಂ ಶಿವಾರ್ಪಣಮಸ್ತು**

# ಮಾಂದಾತದ ಓಂಕಾರೇಶ್ವರ



**ಎಲ್ಲಿದೆ?** ಮಧ್ಯಪ್ರದೇಶದ ಪರ್ವತ ಶ್ರೇಣಿಯಲ್ಲಿ, ನರ್ಮದಾ ನದಿಯ ತೀರದಲ್ಲಿದೆ. ಮಾಮಲ್ಲೇಶ್ವರ ದ್ವೀಪ ಮತ್ತು ನದಿ "ಓಂ"ಕಾರದ ಮಾದರಿಯಲ್ಲಿರುವುದರಿಂದ ಇದಕ್ಕೆ ಓಂಕಾರೇಶ್ವರ ಎಂದು ಹೆಸರು. ಇಡೀ ಆವರಣದಲ್ಲಿ ಕೋಟಿ ತೀರ್ಥಗಳಿವೆಯಂತೆ. ಈ ಕ್ಷೇತ್ರಕ್ಕೆ ಮಾಂದಾತ ಎಂಬ ಹೆಸರೂ ಇದೆ.

**ಸ್ಥಳ ಪುರಾಣ :** ರಾಕ್ಷಸರ ನಾಶಕ್ಕಾಗಿ ಶಿವನು ಈ ರೂಪ ತಳೆದನೆಂಬುದು ಪುರಾಣ ಪ್ರತೀತಿ. ಮಾಂದಾತನೆಂಬ ಅರಸ ಶಿವನನ್ನು ಒಲಿಸಿ ಇಲ್ಲಿ ನೆಲೆಗೊಳ್ಳುವಂತೆ ಮಾಡಿದನೆಂಬ ಕತೆಯೂ ಇದೆ. ಈ ಕ್ಷೇತ್ರಕ್ಕೆ ಮಾಂದಾತ ಎಂಬ ಹೆಸರು ಬರಲು ಇದು ಕಾರಣ ಎಂದು ನಂಬಿಕೆ. ಕ್ರಿ.ಶ. 1063ರಲ್ಲಿ ಉದಯಾದಿತ್ಯನೆಂಬ ರಾಜ ಇದನ್ನು ಸ್ಥಾಪಿಸಿದನೆಂಬುದು ಚಾರಿತ್ರಿಕ ದಾಖಲೆ. ಸಂಸ್ಕೃತ ಕವಿ ಪುಷ್ಪದಂತ ಇಲ್ಲಿ ಕಾವ್ಯರಚನೆ ಮಾಡಿದನಂತೆ. ಇಂದಿಗೂ ಆತ ರಚಿಸಿದನೆಂದು ನಂಬಲಾದ 'ಶಿವ ಮಹಾಸ್ತೋತ್ರ' ಕೆತ್ತಲ್ಪಟ್ಟಿದೆಯಂತೆ. ಪೇಶ್ವೆ ಬಾಜಿರಾವ್ ಕಾಲದಲ್ಲಿ ಈ ದೇವಸ್ಥಾನದ ಅಭಿವೃದ್ಧಿ ನಡೆಯಿತು. ದೇಗುಲದ ಸದ್ಯದ ಸ್ವರೂಪವನ್ನು ಕ್ರಿ.ಶ.1195ರಲ್ಲಿ ರಾಜ ಭರತ್ ಸಿಂಗ್ ಚೌಹಾಣ್ ನೀಡಿದನು. ನರ್ಮದೆಯ ಸುಂದರನೋಟ, ದಡಗಳ ಮಧ್ಯೆ ಸೇತುವೆ, ಒಂದು ಕ್ಷಣ ಹಾಗೇ ನಿಂತು ನೋಡಿದರೆ ಪರ್ವತ ಶ್ರೇಣಿ, ನದಿಯ ತೀರದುದ್ದಕ್ಕೂ ಹಲವಾರು ದೇಗುಲಗಳ ಶಿಖರಗಳ ಪಡಿಯಚ್ಚು ನರ್ಮದೆಯಲ್ಲಿದೆ. ನಾವು ಈಗ ಸಾಗುವುದು ಓಂಕಾರೇಶ್ವರನೆಡೆಗೆ. ಒಂದು ದಡ ಬ್ರಹ್ಮಪುರಿ, ಅತ್ತಲಿನದು ಶಿವಪುರಿ. ನದಿಯಿಂದ 250ಅಡಿ ಎತ್ತರದಲ್ಲಿ ದೇವಾಲಯವಿದ್ದರೂ ನರ್ಮದೆ ನಿರಂತರ ಶಿವನ ಪಾದ ತೊಳೆಯುತ್ತಾಳಿಲ್ಲಿ. ಹಿಂಭಾಗದಲ್ಲೇ ಪಾರ್ವತಿದೇವಿ ವಿರಾಜಮಾನಳಾಗಿದ್ದಾಳೆ. ಭವ್ಯ ದೇಗುಲದ ಪಾವಟಿಗೆ ಏರುತ್ತಾ ಅತ್ತ ಇತ್ತ ಕಣ್ಣು ಹಾಯಿಸಿದರೆ ಶಿಲ್ಪ ಚಾತುರ್ಯ ಮನತುಂಬುತ್ತದೆ. ಸನಿಹದಲ್ಲೇ ಪುರಾತನ ಓಂಕಾರೇಶ್ವರ ದೇವಾಲಯವೂ ಇದೆ. ಇದಕ್ಕೆ ಹಿನ್ನೆಲೆಯಾದ ಕಥೆಯ ಪ್ರಕಾರ 'ದೇವತೆಗಳನ್ನು ಸೋಲಿಸಿ ವಿಜಯ ಪಡೆದ ರಾಕ್ಷಸರು ಲೋಕ ಕಂಟಕರಾದಾಗ ದೇವತೆಗಳು ಶಿವನನ್ನು ಇಲ್ಲಿ ಆರಾಧಿಸಿ ಅತಿಬಲ ಪಡೆದು ವಿಜೃಂಭಿಸಿದರಂತೆ. ಆತನೇ ಈ "ಓಂಕಾರೇಶ್ವರ" ಎಂದು ನಂಬಿಕೆ. ಮಗದೊಂದೆಡೆ 'ಅಗಸ್ತ್ಯ ಮಹರ್ಷಿಯೂ ತನ್ನ ಪ್ರಿಯ ಶಿಷ್ಯ ವಿಂಧ್ಯನ ಆಸೆಯನ್ನು ಮನ್ನಿಸಲು ಶಿವನನ್ನು ಪ್ರಾರ್ಥಿಸಿದಾಗ... ವಿಂಧ್ಯನು ಪೂಜಿಸುತ್ತಿದ್ದ ಲಿಂಗದಲ್ಲಿ ನೆಲೆಸಿ ಪ್ರಣವ ಸ್ವರೂಪಿ, ಎಂದರೆ ಓಂಕಾರರೂಪಿಯಾಗಿ ಕಂಡನಂತೆ. ಅದೇ ಈ 'ಓಂಕಾರೇಶ್ವರ'. ಇದಕ್ಕೆ ಧಾರೇಶ್ವರ, ಅಮರೇಶ್ವರ ಎಂಬ ಹೆಸರೂ ಇದೆ.' ಎಂಬ ಮಾತು ಕೇಳಿಬರುತ್ತವೆ.

**ದೇವಸ್ಥಾನದ ಸ್ವರೂಪ, ಪ್ರಮುಖ ಉತ್ಸವ :** ಇದು 12 ಅಂತಸ್ತಿನ ಶಿಲಾ ದೇವಾಲಯ. ಕೈಸಾಲೆ ಮತ್ತು ಕಂಬಗಳಿಂದ ಅಲಂಕೃತವಾಗಿದೆ. ಇಲ್ಲಿ ಜ್ಯೋತಿರ್ಲಿಂಗದ 2 ಸ್ವರೂಪಗಳಿವೆ. ಒಂದು ಓಂಕಾರೇಶ್ವರ, ಇನ್ನೊಂದು ಮಮಲೇಶ್ವರ. ಇಲ್ಲಿ ಬೃಹತ್ ಪ್ರಮಾಣದ ಹಸಿರು ಬಣ್ಣದ ನಂದಿಯ ಶಿಲಾವಿಗ್ರಹವಿದೆ. ಹತ್ತಿರದಲ್ಲೇ ವಿಷ್ಣು, ವರಾಹ, ಚಾಮುಂಡಿ ವಿಗ್ರಹಗಳಿವೆ. ಚಾಮುಂಡಿ ದೇವಿಗೆ ಹತ್ತು ಕೈಗಳಿದ್ದು, ಕಪಾಲಗಳಿಂದ ಅಲಂಕೃತವಾಗಿದ್ದಾಳೆ. ಒಟ್ಟು 18.5ಅಡಿ ಎತ್ತರದ ದೇವಿಯ ಎದೆಯ ಮೇಲೆ ಬೃಹದಾಕಾರದ ಚೇಳು ಮತ್ತು ಬಲಗಡೆಯಲ್ಲಿ ಇಲಿ ಇದೆ. ಕಾರ್ತಿಕ ಪೂರ್ಣಿಮೆಯಂದು ವಿಶೇಷ ರಥೋತ್ಸವ ನಡೆಯುತ್ತದೆ. ಶಿವನಿಗೆ ಪ್ರತಿನಿತ್ಯವೂ ಕಡಲೇಬೇಳೆ ನೈವೇದ್ಯ, ಶರನ್ನವರಾತ್ರಿ ವಿಶೇಷ ಉತ್ಸವಗಳಿರುತ್ತದೆ.



**ಸೇರುವ ಮಾರ್ಗ :** ಓಂಕಾರೇಶ್ವರ, ರೈಲು ನಿಲ್ದಾಣದಿಂದ 12 ಕಿ. ಮೀ. ದೂರದಲ್ಲಿದೆ. ಇಂದೋರ್, ಖಾಂಡ್ವ, ಪ್ರಧಾನ ರೈಲು ಮಾರ್ಗದಲ್ಲಿ ಓಂಕಾರೇಶ್ವರವಿದೆ. ಉಜ್ಜಯನಿ ಮತ್ತು ಖಾಂಡ್ವದಿಂದ ಸಾಕಷ್ಟು ಬಸ್ಸುಗಳಿವೆ.

**ವಸತಿ :** ಮಧ್ಯಪ್ರದೇಶದ ಅಧಿಕೃತ ವಸತಿಗೃಹ ಓಂಕಾರೇಶ್ವರದಲ್ಲಿ ಲಭ್ಯ. ಮಾಧವಾಶ್ರಮ, ಗಂಗೋತ್ರಿ ಉತ್ತಮ ಸೇವೆ ನೀಡುವ ವಸತಿಗೃಹಗಳು.

**ಅನಿಲ್ ರಮೇಶ್**
**9980027189**

ನಮ್ಮವರು

# ಆರ್. ವೆಂಕಟಸುಬ್ಬಯ್ಯ, B.A., B.L. (1896–1968)



ನನ್ನ ತಾತ ಆರ್ (ರಾಜಾಪುರ) ವೆಂಕಟಸುಬ್ಬಯ್ಯನವರ ಬಗ್ಗೆ ನನಗೆ ತಿಳಿದಿರುವ ವಿಷಯಗಳನ್ನು ತಿಳಿಸಲು ಇಚ್ಛಿಸುತ್ತೇನೆ.

ಇವರ ಜನನ 1896ನೇ ಇಸವಿಯಲ್ಲಿ (ತಿಂಗಳು, ದಿನಾಂಕದ ಬಗ್ಗೆ ಖಚಿತ ಮಾಹಿತಿ ಇಲ್ಲ), ಆನೇಕಲ್ಲಿನಲ್ಲಿ. ಇವರ ತಂದೆ ತಿಮ್ಮಪ್ಪಯ್ಯ, ಪ್ರಾಥಮಿಕ ಶಾಲೆಯ ಶಿಕ್ಷಕರು. ತಾಯಿ ಸುಬ್ಬಮ್ಮ, ಪಾಟಮ್ಮ ಎಂದೇ ಪರಿಚಿತರು. ನನ್ನ ತಾತನಿಗೆ ನಾಲ್ಕು ಸಹೋದರರು (ಎಲ್ಲರೂ ಚಿಕ್ಕವರೇ) ಮತ್ತು ಇಬ್ಬರು ಸಹೋದರಿಯರು. ವೆಂಕಟಾಚಲ, ಗುಂಡಪ್ಪ, ಕೃಷ್ಣಮೂರ್ತಿ (ಖ್ಯಾತ High School Head Master) ಮತ್ತು ಸುಬ್ಬರಾಮ ಸಹೋದರರಾದರೆ, ಶ್ರೀಮತಿಯರಾದ ಅಚ್ಚಮ್ಮ ಮತ್ತು ಅಲಮೇಲು ಅಕ್ಕಂದಿರು. ಪ್ರಾಥಮಿಕ ಶಿಕ್ಷಣವನ್ನು ಆನೇಕಲ್ಲಿನಲ್ಲಿ ಮುಗಿಸಿದ ನನ್ನ ತಾತ, ಹೆಚ್ಚಿನ ಶಿಕ್ಷಣಕ್ಕೆ ಬೆಂಗಳೂರಿಗೆ ಬಂದರು. ವಾರಾನ್ನದ ಸುಬ್ಬಣ್ಣ ಮತ್ತಿತರ ಸಜ್ಜನರ ಮನೆಯಲ್ಲಿ ವಾರಾನ್ನ ಮಾಡಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಓದು ಮುಂದುವರೆಸಿದರು (1912–13ರ ಇಸವಿ). ನಂತರ B.A. ಓದಿಗೆ ತಿರುಚನಾಪಳ್ಳಿಯ (Trichy), St. Josephs College, University of Madrasಗೆ ಸೇರ್ಪಡೆಯಾದರು. ಮೂರು ವರ್ಷದ B.A. ವ್ಯಾಸಂಗವನ್ನು First Classನಲ್ಲಿ ಪಾಸುಮಾಡಿದರು. (1915–16 ಇಸವಿಯಲ್ಲಿ). ಆನೇಕಲ್ ತಾಲ್ಲೂಕಿನ ಮೊದಲ ಗ್ರಾಜುಯೇಟ್ ಎನಿಸಿದರು! ಆ ಕಾಲದಲ್ಲಿ B.A. ಶಿಕ್ಷಣವನ್ನು ಪಡೆದವರೇ ಅತಿ ವಿರಳ. ಸರ್ಕಾರದಲ್ಲಿ Assistant Commissioner, ಸರಿಸಮನಾದ ಹುದ್ದೆಗಳು ಸಿಗುತ್ತಿದ್ದ ಕಾಲ. ನನ್ನ ತಾತನವರಿಗೆ ಅಂತಹ ಹುದ್ದೆಯೂ ಸಿಕ್ಕಿತ್ತು. ನನ್ನ ಮುತ್ತಾತ ತಿಮ್ಮಪ್ಪಯ್ಯನವರು ಆಗಿನ ಆನೇಕಲ್‌ನಂತಹ ಸಣ್ಣ ಗ್ರಾಮಗಳಲ್ಲಿದ್ದರೂ, ಸ್ವತ: ಕನಿಷ್ಠ ಮಟ್ಟದ ಓದನ್ನು ಪಡೆದಿದ್ದರೂ, ತಮ್ಮ ಮಕ್ಕಳು ಸಂಪೂರ್ಣ ವಿದ್ಯಾವಂತರಾಗಬೇಕೆಂಬ ಹಂಬಲವಿತ್ತು. ತಮಗಿದ್ದ ಆರ್ಥಿಕ ಪರಿಸ್ಥಿತಿಯಲ್ಲಿ ಇದು ಅಸಾಧ್ಯ ಎನಿಸಿದರೂ ಇಂಥ ಬುದ್ಧಿವಂತ ಮಗನನ್ನು ಇನ್ನೂ ಓದಿಸಬೇಕೆಂಬ ಆಸೆ. ಆ ಕಾಲದಲ್ಲಿ Eardley Norton ಎಂಬ ಪ್ರಖ್ಯಾತ British ವಕೀಲ ಮದ್ರಾಸ್ High Courtನಲ್ಲಿ ದಂತ ಕಥೆಯಂತಿದ್ದರು. ನನ್ನ ಮುತ್ತಾತನಿಗೆ ತನ್ನ ಮಗನನ್ನು Nortonನಂತೆ ವಕೀಲ ಮಾಡಬೇಕೆನ್ನುವ ಬಯಕೆ. ಇದರಂತೆ ನನ್ನ ತಾತ ಆ ಕಾಲದ ಪ್ರತಿಷ್ಠಿತ Govt. Law College, Bombayಗೆ ತಮ್ಮ ಬುದ್ಧಿವಂತಿಕೆಯ ಆಧಾರದ ಮೇಲೆ ಪ್ರವೇಶ ಪಡೆದರು. ಮೂರು ವರ್ಷದ B.L. ಡಿಗ್ರಿಯನ್ನು ಉನ್ನತ ಶ್ರೇಣಿಯೊಂದಿಗೆ – ಇಂದಿಗೆ 100 ವರ್ಷಕ್ಕೂ ಹಿಂದೆ ಅಂದರೆ 1918–19ರಲ್ಲಿ ಪಡೆದರು. ಆಗ ಆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಮಹಮದ್ ಆಲಿ ಜಿನ್ನಾರ ವಿದ್ಯಾರ್ಥಿ ನನ್ನ ತಾತ ! ನಂತರ ಬೆಂಗಳೂರಿನ ಬಳೇಪೇಟೆಯಲ್ಲಿ ತಮ್ಮ Lawyer Officeನ್ನು ತೆರೆದು (1921ರ ಸುಮಾರಿನಲ್ಲಿ), 1962 ರವರೆಗೆ ನಡೆಸಿದರು. ನನ್ನ ತಾತನ ವಿವಾಹ ಶ್ರೀಮತಿ ಶಾರದಮ್ಮನವರೊಂದಿಗೆ (ಗುಂಜೂರು ಶ್ರೀನಿವಾಸಯ್ಯನವರ ಮೊದಲನೆ ಹೆಂಡತಿಯ ಮಗಳು) 1915ರ ಸುಮಾರಿನಲ್ಲಿ ನಡೆಯಿತು. ಇವರಿಗೆ ನನ್ನ ತಂದೆ R.V. ಪದ್ಮನಾಭ, Prof of Physics, Central College ಅವರೂ ಸೇರಿದಂತೆ ಆರು ಗಂಡು ಮಕ್ಕಳು. ತೀಕ್ಷ್ಣ ಬುದ್ಧಿಮತ್ತೆ, ಇಂಗ್ಲಿಷ್, ಕನ್ನಡ, ಹಿಂದಿ, ಉರ್ದು, ತಮಿಳು ಭಾಷೆಗಳ ಮೇಲೆ ಹಿಡಿತ, ಸಂಗೀತದಲ್ಲಿ ಜ್ಞಾನ, ಊಟದ ರುಚಿಗಳ ಬಗ್ಗೆ ರಸಿಕತೆ ಮತ್ತು ಮುಖ್ಯವಾಗಿ ಎಂತಹ ಸಂದರ್ಭದಲ್ಲೂ ಹಾಸ್ಯಮಯ ವ್ಯಕ್ತಿತ್ವ ನನ್ನ ತಾತನಲ್ಲಿ ಮಿಳಿತವಾಗಿತ್ತು. ನನ್ನ ಪಿತಾಮಹ, ಪ್ರಪಿತಾಮಹರನ್ನು ನನಗೆ ತಿಳಿದಿರುವ ಕೆಲವು ವಿಷಯಗಳ ಮೂಲಕ ಜ್ಞಾಪಕ ಮಾಡಿಕೊಂಡಿದ್ದೇನೆ. ಅವರ ಕಾಲ ಘಟ್ಟದಲ್ಲಿ (20ನೇ ಶತಮಾನದ ಪ್ರಾರಂಭದಲ್ಲಿ) ಅವರಿಗಿದ್ದ ಅತಿ ಕಡಿಮೆ ಸೌಲಭ್ಯಗಳ ನಡುವೆ, ಆಗ ಸಾಮಾನ್ಯವಾದ ಕಷ್ಟದ ಆರ್ಥಿಕ ಮುಗ್ಗಟ್ಟಿನ ಹೊರತಾಗಿಯೂ, ಆಗಿನ ಕಾಲದ British ಪದ್ಧತಿಯ ಕಠಿಣ ಶಿಕ್ಷಣ ಕ್ರಮದ ಕಷ್ಟವನ್ನು ಎದುರಿಸಿ B.A., B.L. ಪದವಿಗಳನ್ನು ಪ್ರಥಮ ಶ್ರೇಣಿಯಿಂದ ಪಾಸು ಮಾಡಿದ ನನ್ನ ತಾತ ಶ್ರೀ ವೆಂಕಟಸುಬ್ಬಯ್ಯನವರ ಬಗ್ಗೆಯೂ, ಇವೆಲ್ಲಕ್ಕೂ ಜೊತೆಯಾಗಿ ನಿಂತು ಉತ್ತೇಜಿಸಿದ ನನ್ನ ಮುತ್ತಾತ ತಿಮ್ಮಪ್ಪಯ್ಯನವರ ಬಗ್ಗೆಯೂ ಅಭಿಮಾನ, ಗೌರವ ಮೂಡಿದೆ.



**ಆರ್.ಪಿ. ಮೋಹನ್**
**9449958158**

## ಶ್ರೀ ಕಾಶೀ ವಿಶ್ವನಾಥೇಶ್ವರ ದೇವಾಲಯ – ದೊಮ್ಮಸಂದ್ರ

ಈ ದೇವಾಲಯವು ಸುಮಾರು 200 ವರ್ಷ ಪುರಾತನವಾದದ್ದು. ಬೃಹಚ್ಚರಣ ಸಮುದಾಯದ ನನ್ನ ಪಿತಾಮಹರಾದ ದಿವಂಗತ ಮೃತ್ಯುಂಜಯರಾಯರು ಕಾಶಿಯಿಂದ ಲಿಂಗವನ್ನು ಸ್ವತಃ ಹೊತ್ತು ತಂದು ಇಲ್ಲಿ ಪ್ರತಿಷ್ಠಾಪಿಸಿದರು. ಗ್ರಾಮಸ್ಥರ ಸಹಕಾರದಿಂದ 2005ರಲ್ಲಿ ಜೀರ್ಣೋದ್ಧಾರವಾಯಿತು. ನೂತನವಾಗಿ ಎರಡು ರಥಗಳ ನಿರ್ಮಾಣವಾಯಿತು. ಕಾಮನ ಹುಣ್ಣಿಮೆಯಂದು ಪ್ರತಿ ವರ್ಷ ರಥೋತ್ಸವ ನಡೆಯುತ್ತದೆ. ಆಶ್ವಯುಜ ಮಾಸದ ನವರಾತ್ರಿಯಲ್ಲಿ ದೇವರಿಗೆ ಪ್ರತಿನಿತ್ಯ ವಿವಿಧ ಅಲಂಕಾರಗಳನ್ನು ಮಾಡಿ ಮತ್ತು ಗೊಂಬೆಗಳನ್ನು ಕೂರಿಸಲಾಗುತ್ತದೆ. ವಿಜಯದಶಮಿಯಂದು ಅಂಬು ಹಾಕುವ ಸಂಭ್ರಮವೂ ಇರುತ್ತದೆ. ಕಾರ್ತೀಕ ಸೋಮವಾರಗಳಲ್ಲಿ ವಿಶೇಷ ಪೂಜೆಗಳು ಮತ್ತು ಕಡೆಯ ಸೋಮವಾರ ದೀಪೋತ್ಸವ ಜರುಗಿಸಲಾಗುತ್ತದೆ. ಶಿವರಾತ್ರಿಯಲ್ಲಿ ದಿನಪೂರ್ತಿ ಅಭಿಷೇಕ, ಅಲಂಕಾರ, ಅರ್ಚನೆ, ಮನೋರಂಜನೆ, ಭಜನೆ ಕಾರ್ಯಕ್ರಮಗಳು ನಡೆಯುತ್ತದೆ. ಇದಲ್ಲದೆ ಪ್ರತಿ ಸೋಮವಾರ ಭಜನೆಗಳು, ಸಂಕಷ್ಟಹರ ಗಣಪತಿ ಪೂಜೆ, ಸತ್ಯನಾರಾಯಣ ಪೂಜೆ, ಪ್ರದೋಷ ಪೂಜೆ ಪ್ರತಿ ತಿಂಗಳು ನಡೆಯುತ್ತದೆ. ನವರಾತ್ರಿ ಉತ್ಸವದ ಸಂದರ್ಭದಲ್ಲಿ ದೇವಾಲಯದಲ್ಲಿ ನಡೆದ ಪೂಜಾ ಕೈಂಕರ್ಯಗಳ ವಿಶೇಷವನ್ನು ಇತ್ತೀಚೆಗೆ ಟಿ.ಟಿ.ಡಿ.ಯ ದೂರದರ್ಶನ ಛಾನೆಲ್‌ನಲ್ಲಿ ಪ್ರಸಾರ ಮಾಡಿತ್ತು.



**ಡಿ.ಎಸ್.ಗೋವಿಂದರಾಜು**
**8618910179**

ಯುವ ಪ್ರತಿಭೆ

## ಮುತ್ತುರಾಜ್ – ಬೆಳ್ಳಿಪರದೆಯ ಉದಯೋನ್ಮುಖ ಪ್ರತಿಭೆ




ಸಮುದಾಯದ ಹಿರಿಯ ಸದಸ್ಯರಾದ ಶ್ರೀಮತಿ ಮತ್ತು ಶ್ರೀ ಡಿ.ಎಂ.ಶೇಖರ್‌ರವರ ಪುತ್ರ ಚಿ. ಮುತ್ತುರಾಜ್‌ರವರು ಬೆಳ್ಳಿತೆರೆಯಲ್ಲಿ ತಮ್ಮನ್ನು ತಾವು ನಿರ್ದೇಶಕರಾಗಿ ಮತ್ತು ನಟನೆಯಲ್ಲೂ ಗುರುತಿಸಿಕೊಂಡಿದ್ದಾರೆ. ಚಿ.ಮುತ್ತುರಾಜ್‌ರವರು ಡಿ.ವಿ.ಎಂ. ಗ್ರೂಪ್ಸ್, ನಮ್ ಶಾರ್ಟ್ ಫಿಲಂಸ್ ಮತ್ತು ಡ್ರೀಮ್ ಹೌಸ್ ಪ್ರೊಡಕ್ಷನ್ ಲಾಂಛನಗಳಲ್ಲಿ ನಿರ್ದೇಶಿಸಿದ ಕಿರುಚಿತ್ರಗಳು ಪ್ರೀತಿಯಲ್ಲಿ, ನಾ ರಾಕ್ಷಸ, ಪ್ರೀತಿಯಲ್ಲಿ–2. ತೃಪ್ತಿ, ಸ್ವಿಚ್ ಆಫ್, ನೆತ್ತರು, ವಿಮರ್ಶೆ. "ಕತ್ತಲಿನ ತ್ರಿಶೂಲ" ಎಂಬ ಚಿತ್ರದಲ್ಲಿ ಸಹ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇನ್ನು ಹಿರಿಯ ತೆರೆಯಲ್ಲಿ ನಟನಾಗಿ ಅವರು ನಟಿಸಿರುವ ಚಿತ್ರಗಳೆಂದರೆ ಆದಿ ಪುರಾಣ, ಟೆಡ್ಡಿ ಬೇರ್ ಮತ್ತು ಪರಿಶುದ್ಧಮ್. ಚಿ.ಮುತ್ತುರಾಜ್ ನಿರ್ದೇಶಿಸಿದ "ವಿಮರ್ಶೆ" ಎಂಬ ಕಿರು ಚಿತ್ರಕ್ಕೆ "ಅತ್ಯುತ್ತಮ ಯುವ ನಿರ್ದೇಶಕ" ಪುರಸ್ಕಾರ ದೊರಕಿದೆ. ಇದೇ ಚಿತ್ರಕ್ಕೆ ಧನಬಾದ್ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ, ಬೇಹಲಾಲ್ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ, ಸಂಗರೂರ್ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ, ಇಂಡೀ ಚಲನಚಿತ್ರ ಮತ್ತು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲೂ ಪ್ರಶಸ್ತಿ ದೊರಕಿದೆ.



ಸಂಘವು ಅರಳುತ್ತಿರುವ ಬೆಳ್ಳಿತೆರೆಯ ಮೊಗ್ಗಿಗೆ ಅಭಿನಂದಿಸುತ್ತದೆ ಹಾಗೂ ಚಲನಚಿತ್ರರಂಗದಲ್ಲಿ ಇವರು ಇನ್ನೂ ಹೆಚ್ಚಾಗಿ ಅರಳಲಿ ಎಂದು ಆಶಿಸುತ್ತದೆ.

(ಮುತ್ತುರಾಜ್– ಮೊ.:9916341324)

# ಶ್ರೀ ಗಿರಿಜಾ ಕಲ್ಯಾಣ - 27.11.2022













# ಶ್ರೀ ಗಿರಿಜಾ ಕಲ್ಯಾಣ - 27.11.2022













# ಶ್ರೀ ಗಿರಿಜಾ ಕಲ್ಯಾಣ - 27.11.2022













# ಶ್ರೀ ಗಿರಿಜಾ ಕಲ್ಯಾಣ - 27.11.2022








# ಶ್ರೀ ಗಿರಿಜಾ ಕಲ್ಯಾಣ - 27.11.2022













# ಶ್ರೀ ಗಿರಿಜಾ ಕಲ್ಯಾಣ - 27.11.2022








# ಶ್ರೀ ಗಿರಿಜಾ ಕಲ್ಯಾಣ - 27.11.2022













# ಶ್ರೀ ಗಿರಿಜಾ ಕಲ್ಯಾಣ – 27.11.2022








# ಶ್ರೀ ಗಿರಿಜಾ ಕಲ್ಯಾಣ – 27.11.2022








# ಶ್ರೀ ಗಿರಿಜಾ ಕಲ್ಯಾಣ – 27.11.2022













# 50 ವರ್ಷಗಳ ದಾಂಪತ್ಯವನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನ ಸಮಾರಂಭ


ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಜಿ. ವೆಂಕಟೇಶ್ (27.05.1970)


ಶ್ರೀಮತಿ ಜಿ.ಲೀಲಾವತಿ ಮತ್ತು ಶ್ರೀ ಕೆ.ಗುಂಡಪ್ಪ (29.05.1969)


ಶ್ರೀಮತಿ ಎಸ್.ಗೀತಾ ಮತ್ತು ಶ್ರೀ ವಿ. ಶ್ರೀನಿವಾಸ ಮೂರ್ತಿ (17.05.1968)


ಶ್ರೀಮತಿ ಎಸ್.ಶೈಲಜಾ ಮತ್ತು ಶ್ರೀ ಬಿ.ಎಸ್.ಸೂರ್ಯನಾರಾಯಣ (09.03.1970)


ಶ್ರೀಮತಿ ಪದ್ಮಾ ಮತ್ತು ಶ್ರೀ ಎಸ್.ತ್ಯಾಗರಾಜನ್ (25.05.1972)


ಶ್ರೀಮತಿ ಸುನಂದಾ ಶ್ರೀನಿವಾಸನ್ ಮತ್ತು ಶ್ರೀ ಎಸ್.ಶ್ರೀನಿವಾಸನ್ (25.03.1970)

# 50 ವರ್ಷಗಳ ದಾಂಪತ್ಯವನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನ ಸಮಾರಂಭ


ಶ್ರೀಮತಿ ಪದ್ಮಾವತಮ್ಮ ಮತ್ತು ಶ್ರೀ ಬಿ.ಎ. ಲಕ್ಷ್ಮಣ ಶರ್ಮ (26.11.1971)


ಶ್ರೀಮತಿ ಹೆಚ್.ಪಿ.ಸೂರ್ಯಕುಮಾರಿ ಮತ್ತು ಶ್ರೀ ಆರ್.ಭಗವಾನ್ (02.10.1968)


ಶ್ರೀಮತಿ ಎನ್.ಉಷಾ ಮತ್ತು ಶ್ರೀ ಎನ್.ನಾಗರಾಜ್ (02.06.1972)


ಶ್ರೀಮತಿ ಎಂ.ಗಿರಿಜಾ ದೇವಿ ಮತ್ತು ಶ್ರೀ ಎಂ.ವೆಂಕಟೇಶ ಮೂರ್ತಿ (15.05.1970)


ಶ್ರೀಮತಿ ಸೀತಾಲಕ್ಷ್ಮಿ ಮತ್ತು ಶ್ರೀ ಅಟ್ಟೂರು ರಾಮಕೃಷ್ಣ ಶರ್ಮ (05.12.1969)


ಶ್ರೀಮತಿ ಕಮಲಮ್ಮ ಮತ್ತು ಶ್ರೀ ಎನ್.ಚಂದ್ರಶೇಖರಯ್ಯ (21.08.1970)

# 50 ವರ್ಷಗಳ ದಾಂಪತ್ಯವನ್ನು ಪೂರೈಸಿದ ದಂಪತಿಗಳಿಗೆ ಸನ್ಮಾನ ಸಮಾರಂಭ



ಶ್ರೀಮತಿ ಲಲಿತಾ ಮೌಳಿ ಮತ್ತು ಶ್ರೀ ಆರ್.ಚಂದ್ರಮೌಳಿ (09.06.1968)



ಶ್ರೀಮತಿ ಗೀತಾಲಕ್ಷ್ಮಿ ಮತ್ತು ಶ್ರೀ ಎಸ್.ಛಾಯಾಪತಿ (26.05.1969)



ಶ್ರೀಮತಿ ಲಲಿತಾ ಮತ್ತು ಶ್ರೀ ಎಸ್.ದೊರೆಸ್ವಾಮಿ (24.05.1968)

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ











# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ












# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ

















## ತುಂಬುರು-ನಾರದರ ಗರ್ವಭಂಗ



ಒಂದು ಸಾರಿ ತುಂಬುರು ಮತ್ತು ನಾರದರಿಗೆ "ನಾನು ಶ್ರೇಷ್ಠ ಸಂಗೀತಗಾರ, ನಾನು ಶ್ರೇಷ್ಠ ಸಂಗೀತಗಾರ" ಎಂದು ಜಗಳ ಶುರುವಾಯಿತು. ಇವರಿಬ್ಬರು ಇಂದ್ರನ ಹತ್ತಿರ ಹೋಗಿ, ಯಾರು ಶ್ರೇಷ್ಠ ಸಂಗೀತಗಾರ ಎಂಬ ಬಿರುದಿಗೆ ಅರ್ಹರು ಎಂದು ಕೇಳುತ್ತಾರೆ. ಅವನು ಯೋಚಿಸಿ, ಇವರಿಬ್ಬರಲ್ಲಿ ಯಾರೊಬ್ಬರು ಶ್ರೇಷ್ಠ ಎಂದರೂ ಇನ್ನೊಬ್ಬರು ಶಪಿಸುತ್ತಾರೆ ಎಂದು ಇವರಿಬ್ಬರನ್ನು ಬ್ರಹ್ಮನ ಹತ್ತಿರ ಕಳುಹಿಸುತ್ತಾನೆ. ಬ್ರಹ್ಮನು ಯೋಚಿಸಿ, ನಾರದ ಎಂದು ಹೇಳಿದರೇ, ತುಂಬುರು "ನೋಡಿದೆಯಾ! ಮಗನಿಗೆ ಬಿರುದು ಕೊಟ್ಟ" ಎಂದುಕೊಳ್ಳುತ್ತಾನೆ. ತುಂಬುರುರಿಗೆ ಕೊಟ್ಟರೆ, ನಾರದನು, "ನೋಡಿದೆಯಾ! ಮಗನ ಬಿಟ್ಟು ಅವನಿಗೆ ಕೊಟ್ಟ" ಎಂದುಕೊಳ್ಳುತ್ತಾನೆ. ಅದಕ್ಕೆ ಬ್ರಹ್ಮನು, ಅವರಿಬ್ಬರನ್ನು ಶಿವನ ಬಳಿ ಕಳುಹಿಸುತ್ತಾನೆ. ಶಿವನು ಇವರ ಅಹವಾಲನ್ನು ಕೇಳಿ, "ನನಗೆ ಮೊದಲೇ ಬೋಳೆ ಶಂಕರ ಎನ್ನುವ ಹೆಸರಿದೆ. ನಾನೇನು ನಿಮಗೆ ನ್ಯಾಯವನ್ನು ಕೊಡಿಸಬಲ್ಲೆ, ಆದ್ದರಿಂದ ನೀವು ಶ್ರೀಹರಿ ಹತ್ತಿರ ಹೋಗಿ" ಎಂದು ಅವರನ್ನು ಸಾಗಿಹಾಕುತ್ತಾನೆ. ಅವರು ಸೀದ ಹರಿಯ ಹತ್ತಿರ ಹೋಗುತ್ತಾರೆ. ಅವನು ಯೋಚಿಸಿ, ಇವರಿಬ್ಬರ ಅಹಂಕಾರ ಮುರಿಯಲು ತಾನೇ ಸರಿ ಎಂದು ಇವರಿಬ್ಬರನ್ನು ಕುರಿತು "ನೀವಿಬ್ಬರೂ ಈಗಲೇ ಗಂಧಮಾದವ ಪರ್ವತಕ್ಕೆ ಹೋಗಿ. ಅಲ್ಲಿ ಮಾರುತಿ ಇರುವನು. ಅವನು ನಿಮ್ಮ ಸಮಸ್ಯೆಯನ್ನು ಬಗೆಹರಿಸುವನು" ಎನ್ನುತ್ತಾನೆ. ಇಬ್ಬರೂ ಗಂಧಮಾದವ ಪರ್ವತಕ್ಕೆ ಬಂದು ಮಾರುತಿಗೆ ನಮಿಸುತ್ತಾರೆ. ಮಾರುತಿಯು ಇವರ ಅಹವಾಲನ್ನು ಕೇಳಿ "ಸರಿ, ನೀವಿಬ್ಬರೂ ಅಲ್ಲಿ ಕಾಣುವ ಬಂಡೆಯ ಮೇಲೆ ನಿಮ್ಮ ನಿಮ್ಮ ವಾದ್ಯಗಳನ್ನು ಇಟ್ಟು ಅಲ್ಲಿ ಕಾಣುವ ಕೊಳದಲ್ಲಿ ಸ್ನಾನ ಮಾಡಿಕೊಂಡು ಬನ್ನಿ. ಆಮೇಲೆ ನಿಮ್ಮ ನಿಮ್ಮ ಹಾಡುಗಳನ್ನು ಕೇಳಿ ತೀರ್ಪು ಕೊಡುತ್ತೇನೆ" ಎನ್ನುತ್ತಾನೆ. ಅವರಿಬ್ಬರು ಅವರ ವಾದ್ಯಗಳನ್ನು ಅಲ್ಲಿ ಬಂಡೆಯ ಮೇಲಿಟ್ಟು, ಸ್ನಾನಕ್ಕೆ ಹೋಗುತ್ತಾರೆ. ಅಷ್ಟರಲ್ಲಿ ಮಾರುತಿಯು ಕಣ್ಣುಗಳನ್ನು ಮುಚ್ಚಿಕೊಂಡು ರಾಮಧ್ಯಾನ ಮಾಡುತ್ತಾ ಆ ವಾದ್ಯಗಳ ಮೇಲೆ ಒಂದು ಬಂಡೆಯನ್ನು ಕೂರಿಸುತ್ತಾನೆ. ಅವರಿಬ್ಬರೂ ಬಂದ ಮೇಲೆ, "ನಿಮ್ಮ ನಿಮ್ಮ ವಾದ್ಯಗಳನ್ನು ನಿಮ್ಮ ಸಂಗೀತದ ಮೂಲಕ ಪಡೆಯಿರಿ" ಎನ್ನುತ್ತಾನೆ. ಅವರುಗಳು ಕೆಟ್ಟ ಮೇಲೆ ಬುದ್ಧಿ ಬಂತು ಎಂದು ಮಾರುತಿಯನ್ನು ಅಂಗಲಾಚುತ್ತಾ, ತಮ್ಮ ತಮ್ಮ ವಾದ್ಯಗಳನ್ನು ಪಡೆಯುತ್ತಾರೆ. ಮಾರುತಿಯು ಅವರನ್ನು ಕರೆದು, ಮನುಷ್ಯನಿಗೆ ಅಹಂಕಾರ ಒಳ್ಳೆಯದಲ್ಲ ಎಂದು ಆಶೀರ್ವದಿಸಿ, ಅವರವರ ವಾದ್ಯಗಳನ್ನು ಅವರವರಿಗೆ ಕೊಡುತ್ತಾನೆ. ಅವರಿಬ್ಬರು ಮಾರುತಿಯನ್ನು ಹೊಗಳಿ, ನೀನೆ "ಸಂಗೀತ ನಾದಬ್ರಹ್ಮ" ಎಂಬ ಬಿರುದನ್ನು ಕೊಡುತ್ತಾ, ತಮ್ಮ ತಮ್ಮ ವಾದ್ಯಗಳನ್ನು ತೆಗೆದುಕೊಂಡು ಹರಿ, ಶಿವ ಮತ್ತು ಬ್ರಹ್ಮ ಲೋಕಗಳಿಗೆ ಹೋಗಿ ನಡೆದ ವಿಷಯವನ್ನು ತಿಳಿಸಿ ತಮ್ಮ, ತಮ್ಮ ಸಂಚಾರಕ್ಕೆ ಹೋಗುತ್ತಾರೆ.



**ಎ.ವಿ.ಶ್ರೀನಿವಾಸನ್**
**7259269434**

## ಬೃಹಚ್ಚರಣ ಗ್ರಾಮ - ಚೂಡಸಂದ್ರ

ಚೂಡ<[ಚೂಡನಾಥ/ಚಂದ್ರಚೂಡ(=ಈಶ್ವರ)]+ಸಂದ್ರ<ಸಮುದ್ರ 'ಸಂದ್ರ' ಎಂದು ಅಂತ್ಯವಾಗುವ ಎಲ್ಲ ಗ್ರಾಮಗಳೂ ಬ್ರಾಹ್ಮಣರಿಗೆ ಉಂಬಳಿಯಾಗಿ ಬಂದಿರುವ ಗ್ರಾಮಗಳು.

ಚೂಡ ಎಂದರೆ ಶೇಖರ ಗಮನಿಕೆ : "ಚೂಡಳ್ಳಿ"ಎನ್ನುವ ಗ್ರಾಮವೊಂದು ಆನೇಕಲ್ ಹಾಗೂ ಗುಮ್ಮಳಾಪುರದ ನಡುವೆ ಇದೆ, ಕರ್ನಾಟಕ, ತಮಿಳುನಾಡು ಗಡಿಯಲ್ಲಿರುವ ಹೊಸೂರಿನ ಬೆಟ್ಟದ ಮೇಲೆ ಚೂಡನಾಥೇಶ್ವರನ ದೇವಾಲಯವಿದೆ, ಕ್ರಿ.ಶ.1650ರಲ್ಲಿ ಗುಮ್ಮಳಾಪುರದ "ಪ್ರಭುಗ" ಎನ್ನುವ ಒಬ್ಬ ಕವಿ ಚೂಡನಾಥಾಸ್ಥಾನ ಎನ್ನುವ ಕನ್ನಡ ಕಾವ್ಯ ಬರೆದಿದ್ದಾನೆ. ಈ ಚೂಡನಾಥ ಹೊಸೂರಿನ ಚೂಡನಾಥೇಶ್ವರ. ಚೂಡಸಂದ್ರದ ಬೃಹಚ್ಚರಣರು ಕನ್ನಡ ಕಲಾಪ್ರಪಂಚಕ್ಕೆ ಅನುಪಮ ಸೇವೆ ಸಲ್ಲಿಸಿದ್ದು ದೇಶ-ವಿದೇಶಗಳಲ್ಲಿ ನೆಲೆಸಿದ್ದಾರೆ. ಹಾಸ್ಯನಟ ಶಿವರಾಂರವರು ಕನ್ನಡ ಚಿತ್ರರಂಗದಲ್ಲಿ ವಿವಾದಾತೀತರಾದ ವ್ಯಕ್ತಿತ್ವವುಳ್ಳ ಅಭಿನೇತ್ರರಾಗಿದ್ದರು.



**ಕೆ.ಎಸ್.ಮಧುಸೂದನ**
**9902145359**

## ಜನನ



ಸದಸ್ಯ ಶ್ರೀ ಬಿ.ಪಿ.ಸಂದೀಪ್ ದಂಪತಿಗಳಿಗೆ ದಿನಾಂಕ 28.8.2022ರಂದು ಬೆಂಗಳೂರಿನಲ್ಲಿ ಗಂಡು ಮಗು ಜನನವಾಯಿತು.

**ಸಂಘವು ನವಜಾತ ಶಿಶುವಿಗೆ ಆಯುರಾರೋಗ್ಯ ಹಾಗೂ ವಿದ್ಯೆಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

## ಉಪನಯನ

ಸದಸ್ಯ ಶ್ರೀ ಎ. ಜಿ.ರಘುನಂದನ್ ಮತ್ತು ಶ್ರೀಮತಿ ವೀಣಾ ರಘುನಂದನ್ ದಂಪತಿಗಳು ದಿನಾಂಕ 8.5.2022ರಂದು ಅವರ ಪುತ್ರ ಚಿ. ಆರ್ಯನ ಉಪನಯನವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

**ವಟುವಿಗೆ ಸಂಘದ ಶುಭ ಆಶೀರ್ವಾದಗಳು.**



## ಗೃಹಪ್ರವೇಶ



ಸದಸ್ಯ ಶ್ರೀ ಆರ್.ಎ. ಶ್ರೀಕಾಂತ್ ಮತ್ತು ಶ್ರೀಮತಿ ಕೆ. ವಿದ್ಯಾ ದಂಪತಿಗಳು ದಿನಾಂಕ 8.9.2022ರಂದು ಅವರ ನೂತನ ಗೃಹ "ಶ್ರೀಶರಸ್ಯಾಮ್"ನ ಗೃಹಪ್ರವೇಶವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

**ಶ್ರೀಮತಿ ವಿದ್ಯಾ ಮತ್ತು ಶ್ರೀ ಶ್ರೀಕಾಂತ್ ದಂಪತಿಗಳಿಗೆ ಸಂಘದ ಶುಭ ಹಾರೈಕೆಗಳು.**

## ಅನುಭವದ ನುಡಿಗಳು

- ಏರೋ ರಥ ಒಂದು ಮನೋರಥ ನೂರು.
- ಕರಿದಿದ್ದು ಕರಕಲು ಹುರಿದಿದ್ದು ಸೀಕಲು.
- ಕಸಬು ಕಸಾಯಿ ಹೆಸರು ದಯಾಮಯಿ.
- ಕುಣಿತ ನೋಡಿ ಗಣಿತ ಮರೆತ.
- ಕುಲ ಶುದ್ಧವಾದರೆ ಮಲ ಶುದ್ಧವೇ.
- ಕೇಳಿದ್ದೆಲ್ಲಾ ಹೋಲಿಸಬೇಡ ಹೇಳಿದ್ದೆಲ್ಲಾ ಪಾಲಿಸಬೇಡ.
- ಗತಿ ಕೆಟ್ಟರೂ ಮತಿ ಕೆಡಬೇಡ.
- ಜ್ಞಾನ ಬಂದರೆ ಹೋಗೋದಿಲ್ಲ ಮಾನ ಹೋದರೆ ಬರೋದಿಲ್ಲ.
- ಅಳಿಸಿ ಅಳಿಸಿ ಬರಿ ಅಗಿದು ಅಗಿದು ನುಂಗು.
- ಅಕ್ಕಿ ಇದ್ದ ಹಾಗೆ ಅನ್ನ ಒರೆ ಇದ್ದ ಹಾಗೆ ಚಿನ್ನ.
- ಆಗ ಹುಡುಕಾಟ ಈಗ ಮಿಡುಕಾಟ
- ಆಗೋರು ಹೋದರು ಆಗದವರು ಬಂದರು
- ಆಚಾರವಿದ್ದರೆ ವಿಚಾರ ಆಹಾರವಿದ್ದರೆ ವಿಹಾರ.
- ಇಕ್ಕಳ ಒಂಟಿಯಲ್ಲ ದಬ್ಬಳ ಜೋಡಿಯಲ್ಲ.
- ಉಪಚಾರವಾದರೂ ವಿಪರೀತವಾದರೆ ಅಪಚಾರವಾದೀತು.
- ಏನೂ ಇಲ್ಲದ ತಲೇಲಿ ಹೇನೂ ಇಲ್ಲವೆ?
- ಔಷಧಕ್ಕಾಗದ ಮೂಲಿಕೆ ಇಲ್ಲ ಮಂತ್ರಕ್ಕಾಗದ ಅಕ್ಷರವಿಲ್ಲ.
- ಕಡಲೇನೋ ಬಲುಚೆಂದ ದಡದಲ್ಲೇ ಇರು ಕಂದ.
- ಕಂಡಿದ್ದೆಲ್ಲಾ ಶುಚಿಯಲ್ಲ ಉಂಡಿದ್ದೆಲ್ಲಾ ರುಚಿಯಲ್ಲ.
- ಕನಕಾಂಬರ ಉಳ್ಳವರೆಲ್ಲಾ ಜನಕರಾಜರೇ?



**ಭ್ರಮರ ಗೋಪಿನಾಥ್**
**6366701153**

# ಅಮೆರಿಕದಲ್ಲಿ ನಾನು ಕಂಡ ದೇವಾಲಯಗಳು - ಶ್ರೀ ಕೃಷ್ಣ ವೃಂದಾವನ (ಕಂತು-2)



ನಾನು ಒಂದು ವಾರ ನ್ಯೂಯಾರ್ಕ್‌ನಲ್ಲಿದ್ದಾಗ ಪಕ್ಕದ ರಾಜ್ಯವಾದ ನ್ಯೂಜೆರ್ಸಿಗೆ ಹೋಗುವ ಅವಕಾಶ ದೊರಕಿತು. ನ್ಯೂಜೆರ್ಸಿ ರಾಜ್ಯದಲ್ಲಿ ಎಡಿಸನ್ ಎಂಬ ಸ್ಥಳವಿದೆ. ಇಲ್ಲಿ ಶ್ರೀ ಕೃಷ್ಣ ವೃಂದಾವನ ಎಂಬ ಉಡುಪಿ ಕೃಷ್ಣ ಮಠವಿದೆ. ಪುತ್ತಿಗೆ ಮಠದ ಪೂಜ್ಯ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮಿಗಳು ಡಿಸೆಂಬರ್ 2002ರಲ್ಲಿ ಇದನ್ನು ಸ್ಥಾಪಿಸಿದರು. ಸೃಜನ ರಿಲಿಜಿಯಸ್ ಅಂಡ್ ಚಾರಿಟೇಬಲ್ ಫೌಂಡೇಶನ್‌ನ ಅಂಗ ಸಂಸ್ಥೆಯಾಗಿ 2009ರವರೆಗೆ ಕಾರ್ಯನಿರ್ವಹಿಸಿತು. 2009ರಲ್ಲಿ ಎಡಿಸನ್‌ನಲ್ಲಿ ಸ್ವಂತಕ್ಕೆ 3.5 ಎಕರೆ ಪ್ರದೇಶವನ್ನು ಪಡೆದು 15000 ಚದರ ಅಡಿ ಕಟ್ಟಡವನ್ನು ನಿರ್ಮಿಸಿತು. ಕಟ್ಟಡವು ನೋಡಲು ಬಹಳ ಸುಂದರವಾಗಿದ್ದು ಒಂದು ಪೂಜಾ ಹಾಲ್, ಪ್ರಸಾದ ಹಾಲ್, 280 ಜನ ಕುಳಿತುಕೊಳ್ಳಬಹುದಾದ ವಿವಿಧೋದ್ದೇಶ ಸಮುದಾಯ ಭವನ ಮತ್ತು ಇಲ್ಲಿನ ಅರ್ಚಕರಿಗೆ ವಾಸಿಸಲೆಂದು ಮನೆಗಳನ್ನು ಕಟ್ಟಲಾಗಿದೆ.

ಇಲ್ಲಿನ ಮುಖ್ಯ ದೇವರು ಉಡುಪಿ ಕೃಷ್ಣ. 'ಹರಿ ಸರ್ವೋತ್ತಮ ವಾಯು ಜೀವೋತ್ತಮ' ಎಂಬ ಆಶಯದಂತೆ ಪಕ್ಕದಲ್ಲಿಯೇ ಹನುಮಂತ ದೇವರು ವಿರಾಜಮಾನರಾಗಿದ್ದಾರೆ. ಜೊತೆಗೆ ಕಲಿಯುಗದ ಕಲ್ಪತರು ಎನಿಸಿಕೊಂಡ ಶ್ರೀ ರಾಘವೇಂದ್ರ ಸ್ವಾಮಿಗಳ ಮೃತ್ತಿಕೆಯುಳ್ಳ ಒಂದು ಬೃಂದಾವನವು ಸಹ ಇಲ್ಲಿದೆ. ಉಡುಪಿ ಸಂಪ್ರದಾಯದಂತೆ ಇಲ್ಲಿ ಪೂಜೆ ನಡೆಯುವುದು. ಉಡುಪಿಯಿಂದ ಪೂಜಾ ವಿಧಾನವನ್ನು ಅಭ್ಯಸಿಸಿ ಬಂದ ಅರ್ಚಕ ವರ್ಗ ಇಲ್ಲಿನ ಧಾರ್ಮಿಕ ಆಚರಣೆಗಳನ್ನು ಶ್ರದ್ಧೆಯಿಂದ ನೆರವೇರಿಸುತ್ತದೆ. ದಿನನಿತ್ಯ ಮೂರು ಪೂಜೆಗಳಿದ್ದು ಬೆಳಿಗ್ಗೆ 6.30ರಿಂದ 8.30ರವರೆಗೆ ಮಹಾ ಪೂಜೆ, 12ರಿಂದ 12.30ರವರೆಗೆ ಮಧ್ಯಾಹ್ನ ಪೂಜೆ, ಸಂಜೆ 7ರಿಂದ 8ರವರೆಗೆ ಸಾಯಂ ಪೂಜೆ ನಡೆಯುತ್ತದೆ. ಮಂದಿರವು ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 6.30ರಿಂದ 1.00ರವರೆಗೆ, ಸಂಜೆ 5.00ರಿಂದ 8.30ರವರೆಗೆ ತೆರೆದಿದ್ದರೆ, ಶನಿವಾರ ಮತ್ತು ಭಾನುವಾರಗಳಂದು ಬೆಳಿಗ್ಗೆ 6.00ರಿಂದ ರಾತ್ರಿ 8.30ರವರೆಗೆ ತೆರೆದಿರುತ್ತದೆ. ದಿನದಲ್ಲಿ ಎರಡು ಬಾರಿ ಅನ್ನದಾನವೂ ಇದೆ. ನಾವು ಅಂದು ಅಲ್ಲಿಯೇ ಮಧ್ಯಾಹ್ನ ಪ್ರಸಾದ ಭೋಜನ ಸ್ವೀಕರಿಸಿದೆವು. ಭೋಜನ ಬಹಳ ರುಚಿಕರವಾಗಿದ್ದು ದಸರಾ ಹಬ್ಬದ ಸಮಯವಾದ್ದರಿಂದ ಪಾಯಸ ಮಾತ್ರವಲ್ಲದೆ ಲಾಡು ಸಹ ಊಟದಲ್ಲಿತ್ತು.

ಅತ್ಯುತ್ತಮ ಕುಸುರಿ ಕೆಲಸ ಮಾಡಿದ ಒಂದು ರಥದಂತಹ ಮಂಟಪವನ್ನು ನಿರ್ಮಿಸಿ ಪೂಜಾ ಮಂದಿರದಲ್ಲಿ ಇರಿಸಲಾಗಿದೆ. ಪ್ರಸ್ತುತ ದೇವರುಗಳನ್ನು ಈ ಮಂಟಪದಲ್ಲಿ ಇರಿಸಿರುವರು. ಮುಂದೆ ಒಂದು ಗರ್ಭಗುಡಿಯ ನಿರ್ಮಾಣದ ಯೋಜನೆ ಕಾರ್ಯರೂಪದಲ್ಲಿದೆ.

ಇಲ್ಲಿನ ಹಿಂದು ಸಮುದಾಯ ಹಾಗು ಮುಂದಿನ ಜನಾಂಗಕ್ಕೆ ಶ್ರೀ ಕೃಷ್ಣನ ಬೋಧನೆಯನ್ನು ತಿಳಿಸುವುದಲ್ಲದೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಈ ನಾಡಿನಲ್ಲಿ ಉಳಿಸಿ ಬೆಳೆಸುವ ಕಾರ್ಯವನ್ನು ಶ್ರೀ ಕೃಷ್ಣ ಮಠ ಮಾಡುತ್ತಿದೆ. ಇಂದಿನ ಯುವ ಜನಾಂಗಕ್ಕೆ ನಮ್ಮ ಧರ್ಮದ ವಿಷಯ ಮತ್ತು ಮಹತ್ವವನ್ನು ತಿಳಿಸಿ, ನಮ್ಮ ಧರ್ಮದ ವಿಶಾಲ ವೃಕ್ಷದ ಬೇರುಗಳನ್ನು ಗಟ್ಟಿಗೊಳಿಸುತ್ತಿದೆ. ಎಲ್ಲ ಹಿಂದೂ ಹಬ್ಬ, ಹರಿದಿನಗಳನ್ನು ಇಲ್ಲಿ ಆಚರಿಸಲಾಗುವುದು. ಬೇಸಿಗೆಯಲ್ಲಿ ಸ್ತೋತ್ರ ಮತ್ತು ಭಗವದ್ಗೀತೆ ಉಚಿತ ತರಗತಿಗಳು ಇಲ್ಲಿ ನಡೆಯುವುವು. ಭಾನುವಾರದಂದು ಸಂಸ್ಕೃತ ತರಗತಿಗಳು ನಡೆಯುತ್ತವೆ. ಮಹಿಳೆಯರಿಗೆ ಭಜನಾ ತರಗತಿಗಳೂ ಉಂಟು. 10000 ಕಿಲೋಮೀಟರ್‌ಗೂ ಹೆಚ್ಚು ದೂರದ ಈ ವಿದೇಶದಲ್ಲಿ ನಮ್ಮ ಮಂದಿರ, ಅದರ ಸೇವಾ ಕಾರ್ಯವನ್ನು ಕಂಡು ನನಗಂತೂ ಅತೀವ ಸಂತಸವಾಯಿತು.



ಬಿ.ಇ. ಸೀತಾಲಕ್ಷ್ಮೀ
9980196470

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ

| | | | | |
|---|---|---|---|---|
| | ಪಾರ್ವತಿ | | 3.8.2022 | ಶ್ರೀ ಆರ್.ಕೆ.ಗುರುನಾಥ್‌ರವರ ಪತ್ನಿ |
|  | ಕಾತ್ಯಾಯಿನಿ | | 31.8.2022 | ಸದಸ್ಯರಾದ ಶ್ರೀಯತ ಎಸ್.ಎಲ್.ಸುಬ್ರಹ್ಮಣ್ಯಂ, ಎಸ್.ಎಲ್.ಭಾನುಪ್ರಕಾಶ್ ಮತ್ತು ಪ್ರಶಾಂತ್ ಕುಮಾರ್‌ರವರ ಹಿರಿಯ ಸಹೋದರಿ |
|  | ಮಂಜುಳಾ ಪ್ರಕಾಶ್ | 60 | 30.8.2022 | ಸದಸ್ಯ ಶ್ರೀ ಆರ್.ಎನ್.ಹರಿಪ್ರಸಾದ್‌ರವರ ಸೋದರಿ |
|  | ಸಿ. ಶಾಂತಾ (ಪಾಪು) | 76 | 19.9.2022 | ಹಿರಿಯ ಸದಸ್ಯ ಶ್ರೀ ಎಸ್.ಚಂಪಕಧಾಮರವರ ಪತ್ನಿ |
|  | ಹೆಚ್.ಜಿ. ವಸುಂಧರ | 68 | 13.10.2022 | ಸದಸ್ಯ ಭರತ್ ವಿಜಯಕೃಷ್ಣರವರ ತಾಯಿ ಹಾಗೂ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷ ಶ್ರೀ ಹೆಚ್.ಕೆ.ಶಶಿಧರರವರ ಚಿಕ್ಕಮ್ಮ |
|  | ಆರ್.ಎಸ್.ರಾವ್<br>ಸಂಘದ ಹಿತೈಷಿ ಮತ್ತು ದಾನಿಗಳು | 88 | 27.10.2022 | ಸಂಘದ ಅಧ್ಯಕ್ಷ ಶ್ರೀ ಬಿ.ಸುಬ್ರಹ್ಮಣ್ಯಂರವರ ಮಾವ ಮತ್ತು ಸಂಘದ ಪೋಷಕಿ ಶ್ರೀಮತಿ ನಳಿನಿ ಸುಬ್ರಹ್ಮಣ್ಯಂರವರ ತಂದೆ |
|  | ಆರ್.ಕೆ. ನಾಗಲಕ್ಷಮ್ಮ | 76 | 22.11.2022 | ಸದಸ್ಯ ಶ್ರೀ ಕೆ.ಎಸ್.ಅಶ್ವತ್ಥನಾರಾಯಣರವರ ಪತ್ನಿ |
|  | ರತ್ನಮ್ಮ | 85 | 24.12.2022 | ಸದಸ್ಯ ಶ್ರೀ ಸಣ್ಣೆ ಶ್ರೀಧರ್‌ರವರ ತಾಯಿ |
|  | ಸುಶೀಲ ಚಂದ್ರಶೇಖರನ್ | 88 | 28.12.2022 | ಸದಸ್ಯರಾದ ಶ್ರೀ ಸಿ. ಕಲ್ಯಾಣರಾಮನ್ ಮತ್ತು ಶ್ರೀ ಶೇಷಾದ್ರಿ ವಾಸುರವರ ತಾಯಿ |
|  | ಎಂ.ಎಸ್. ಪ್ರಭಾಕರ<br>ಕನ್ನಡದ ಲೇಖಕರು ಮತ್ತು ಕಾಮರೂಪಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. | 86 | 29.12.2022 | ಸದಸ್ಯರಾದ ಶ್ರೀ ಎಸ್.ಎ. ಸತ್ಯಮೂರ್ತಿ ಮತ್ತು ಶ್ರೀ ಎಸ್.ಎ. ಮಂಜುನಾಥ್‌ರವರ ಸೋದರಮಾವ |



# ಸೌಹಾರ್ದ – ಸಂಘರ್ಷ



ಇಂದಿಗೆ ನಮ್ಮ ನಾಡಿನ ಹೆಮ್ಮೆಯ ದಿನಪತ್ರಿಕೆ, "ಪ್ರಜಾವಾಣಿ" (15.10.2022) ತನ್ನ 74ನೇ ವರ್ಷ ಪೂರೈಸಿ, 75ಕ್ಕೆ ಕಾಲಿಡುತ್ತಿದೆ. ನಮ್ಮ ಮನೆಯಲ್ಲಿ ನಮಗೆ ತಿಳಿವಳಿಕೆ ಬಂದು ಓದುವಂತಾದಾಗಿನಿಂದ – ಅಂದರೆ ಸರಿಸುಮಾರು 60 ವರ್ಷಗಳಿಂದ ನಾವುಗಳು ಇದನ್ನು ಓದಿಕೊಂಡು ಬೆಳೆದಿದ್ದೇವೆ. ದೇಶದ, ಪ್ರಪಂಚದ ಎಲ್ಲಾ ಆಗುಹೋಗುಗಳನ್ನು ನಮ್ಮವರೆಗೆ ತಲುಪಿಸುವುದಲ್ಲದೆ, ನಮ್ಮ ಬದುಕಿನಲ್ಲಿ ನಾಡಿನ ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ ಚಟುವಟಿಕೆಗಳ ಬಗ್ಗೆ ಪರಿಜ್ಞಾನ, ಪರಿಕಲ್ಪನೆಗಳ ಅರಿವು ಮೂಡಿಸಿದೆ.

ಇಂದಿನ ವಿಶೇಷವೇನೆಂದರೆ, ಪತ್ರಿಕೆಯ ಜೊತೆ ದೀಪಾವಳಿ ವಿಶೇಷಾಂಕವು ಬಂದದ್ದು! ಈ ಬಾರಿಯ ವಿಶೇಷವೇನೆಂದರೆ, ಈ ಅಂಕ – "ಸಂಘರ್ಷ–ಸೌಹಾರ್ದ", ಟ್ಯಾಗ್ ಲೈನ್ ಹೊಂದಿದೆ. ಕೆಲವು ಬರಹಗಳು ಈ ಬಗ್ಗೆಯೂ ಮಾತಾಡಿವೆ. ಸಂಚಿಕೆಯಲ್ಲಿನ ಕೆಲವು ಬರಹಗಳನ್ನು ಓದಿದ ನನಗೆ ಅನ್ನಿಸಿದ್ದು, ಮತ್ತು ಸಾಮಾನ್ಯವಾಗಿ ಈಚಿನ ದಶಕಗಳಲ್ಲಿ ನಾವು ನೋಡುತ್ತಿರುವ ಬದಲಾದ ಪ್ರಪಂಚ ಮತ್ತು ಅದರ ವ್ಯಾಪಾರ, ವ್ಯವಹಾರಗಳು.

ಕೌಟುಂಬಿಕ ನೆಲೆಯಲ್ಲಿ, ನೆರೆಹೊರೆಯಲ್ಲಿ, ಸಮಾಜ, ರಾಜ್ಯ, ರಾಷ್ಟ್ರಗಳಲ್ಲಿ – ವಿವಿಧ ಸ್ತರಗಳಲ್ಲಿ ನಾನು ಗಮನಿಸಿದ ವಿಷಯ – ಕಾಳಜಿಯಿಲ್ಲದ, ವಿಶ್ವಾಸಹೀನ ಸಂಬಂಧಗಳು, ಬಹಳ ಕಡಿಮೆ ಸಹಿಷ್ಣುತೆ, ಇತ್ಯಾದಿ. ಒಂದು ರೀತಿಯ ಯಾಂತ್ರಿಕ ಬದುಕು – ಸ್ನೇಹಪರತೆ, ವಿಶ್ವಾಸ ಕಡಿಮೆ. ಕಾರಣ ಒತ್ತಡದ ಜೀವನವಿರಬಹುದು! ಆಯ್ಕೆ ಇರಬಹುದು.

ಇಂತಹ ಬದಲಾದ, ಸೌಹಾರ್ದತೆಯಿಲ್ಲದ ಪರಿಸರ ನನಗೆ ಜ್ಞಾಪಿಸಿದ್ದು ಮೈಸೂರಿನ ಕೃಷ್ಣರಾಜ ಮೊಹಲ್ಲದ ನಮ್ಮ ಮನೆ. ನೆರೆಹೊರೆಯ ಜನ, ಅವರು ತಮ್ಮ ಬದುಕಿನ ಸಂಕಷ್ಟಗಳ ನಡುವೆಯೂ ಇತರರ ಬದುಕಿನ ಭಾಗವಾಗಿ ಜೀವನ ಸಾಗಿಸುತ್ತಿದ್ದದ್ದು. ನಾವು ಇದ್ದಿದ್ದು ಒಂದು ಬಾಡಿಗೆ ಮನೆಯಲ್ಲಿ. ಪಕ್ಕದಲ್ಲಿ ಈಶ್ವರರಾಯರ ಗರಡಿ, ಮುಂದಿನ ಮನೆ ಹೊಳೆನರಸೀಪುರ ಶ್ರೀ ಯೋಗಾನರಸಿಂಹ ಅವರದು. ಅವರ ಮಗ, ಶ್ರೀಯುತ ಎಚ್.ವೈ.ಶಾರದಾಪ್ರಸಾದರು, ಶ್ರೀಮತಿ ಇಂದಿರಾಗಾಂಧಿಯವರ ಮೀಡಿಯಾ ಅಡ್ವೈಸರ್. ಇದು ಒಂದು ಕಡೆಯಾದರೆ, ನಮ್ಮ ಪಕ್ಕದ, ಹಿಂದಿನ ಗಲ್ಲಿಗಳಲ್ಲಿ ಮುಸಲ್ಮಾನರ ಮನೆಗಳು, ಜನಸಂಖ್ಯೆ ಜಾಸ್ತಿ. ಅಷ್ಟೇ ಏಕೆ, ನಾವಿದ್ದ ಮನೆ ಮಾಲೀಕರು ಮುಸಲ್ಮಾನರು. ತಾಯಿ ಮತ್ತು ಮನೆ ತುಂಬಾ ಮಕ್ಕಳು ಅಷ್ಟೇ. ಜೀವನಕ್ಕೆ ನಮ್ಮ ಬಾಡಿಗೆ ಮತ್ತು ನಮ್ಮ ಮನೆಗೆ ಅಂಟಿದಂತಿದ್ದ ಗ್ಯಾರೇಜಿನ ಬಾಡಿಗೆ. ನಮ್ಮ ಎರಡೂ ಮನೆಗಳ ಮಧ್ಯೆ ಹಾಲಿನಲ್ಲಿ (ನಮ್ಮ) ಒಂದು ಬಾಗಿಲು. ಆ ಬಾಗಿಲಾಚೆ ಅವರ ಅಂಗಳ, ಮತ್ತೆ ಮನೆ. ಪ್ರತಿದಿನ ನಮ್ಮ ತಂದೆ ಕಾಲೇಜಿನಿಂದ (ಮಹಾರಾಣಿ) ಬಂದ ಮೇಲೆ, ನಮ್ಮ ಹಾಲಿನ ಮಧ್ಯದ ಬಾಗಿಲು ತೆಗೆದು, ಅಮ್ಮ ಟೀ ಮಾಡಿ ಪಕ್ಕದ ಮನೆಯವರನ್ನು ಕರೆಯುತ್ತಿದ್ದರು. ಟೀ ಒಟ್ಟಿಗೆ ಕುಡಿಯುತ್ತಿದ್ದೆವು.

ಮಕ್ಕಳು ರಂಜಾನ್, ಈದ್ ಗಳಲ್ಲಿ ನಮ್ಮ ಮನೆಗೆ ಬಂದು ಹಿರಿಯರ ಹಾರೈಕೆ ತೆಗೆದುಕೊಳ್ಳುತ್ತಿದ್ದರು. ಅವರ ಟ್ಯಾಕ್ಸಿ ಸರ್ವೀಸ್ ಇದ್ದಿದ್ದರಿಂದ, ಯಾರನ್ನಾದರೂ ದೇವಸ್ಥಾನಗಳಿಗೆ, ತಿರುಪತಿ ಮುಂತಾದ ಕಡೆ ಕರೆದುಕೊಂಡು ಹೋದರೆ, ನಮಗೆ ಪ್ರಸಾದ ತಂದು ಕೊಡುತ್ತಿದ್ದರು. ಇದು 1960ರ ದಶಕದ ಕೊನೆಯ ಮತ್ತು 70ರ ದಶಕದ ಮಾತು. ಆದರೆ ಈ ಪರಿಪಾಠ, ನಾವು ಬೆಂಗಳೂರಿನಲ್ಲಿ ನೆಲೆಸಿದ ಮೇಲೂ ಮುಂದುವರೆದಿತ್ತು. ಬೆಂಗಳೂರಿಗೆ ಯಾರನ್ನಾದರೂ ಕರೆದುಕೊಂಡು ಬಂದರೆ ನಮ್ಮ ಮನೆಗೆ ಬಂದು ನಮ್ಮನ್ನು ನೋಡಿಕೊಂಡು ಹೋಗುತ್ತಿದ್ದರು.

ಇನ್ನು ಆಗಲೇ ಹೇಳಿದಂತೆ ನಮ್ಮ ಮನೆಯನ್ನು ಸೇರಿದಂತೆ ಇನ್ನೊಂದು ಭಾಗದಲ್ಲಿ ಗ್ಯಾರೇಜ್ ಇತ್ತು. ಅಲ್ಲಿನ ಮಾಲೀಕರ ಹೆಸರು ಇಂದೂ ನನಗೆ ಗೊತ್ತಿಲ್ಲ, ನಾವು ಅವರನ್ನು "ಬೈಜೊ" (ದೊಡ್ಡಣ್ಣ) ಎಂದು ಕರೆಯುತ್ತಿದ್ದೆವು. ಸ್ವಲ್ಪ ಸಮಯದ ನಂತರ ನಮ್ಮ ತಂದೆಗೆ ಹಾಸನದ ಜಿಎಫ್ಜಿಸಿ (ಸರ್ಕಾರಿ) ಕಾಲೇಜಿಗೆ ವರ್ಗವಾಯಿತು. ವಾರಕ್ಕೊಮ್ಮೆ ಮೈಸೂರಿಗೆ ಬರುತ್ತಿದ್ದರು. ಅಮ್ಮ ಮೈಸೂರಿನಲ್ಲೇ (ನೂರ್ ಮಂಜಿಲ್ ಮನೆಯ ಹೆಸರು) ಒಬ್ಬರೇ ಇರುತ್ತಿದ್ದರು. ವಾರಾಂತ್ಯದಲ್ಲಿ ಬೆಂಗಳೂರಿನಲ್ಲಿದ್ದ ನಾವು ಹೋದಾಗ ಅವರಿಗೆ ಜೊತೆ. ಆ ದಿನಗಳಲ್ಲಿ ಗ್ಯಾರೇಜಿನ ಮಾಲಿಕರೋ, ಅವರಲ್ಲಿ ಕೆಲಸ ಮಾಡುವ ಹುಡುಗರೋ ಗ್ಯಾರೇಜಿಗೆ ಬಂದ ಕಾರುಗಳನ್ನು ನಮ್ಮ ಮನೆಯ ಮುಂದೆ ನಿಲ್ಲಿಸಿ, ಅವುಗಳಲ್ಲಿ ಮಲಗಿ ನಮಗೆ ಕಾವಲಾಗುತ್ತಿದ್ದರು! ಯಾರಾದರೂ ಪರಿಚಿತರು ನಮ್ಮ ಮನೆಗೆ ಬಂದರೆ ಮಾತ್ರ ಸೀದಾ ಎಂಟ್ರಿ ! ಇಲ್ಲದಿದ್ದರೆ, ಬಾಗಿಲ ಬಳಿ ಬರುವುದಕ್ಕೆ ಮುಂಚೆಯೇ, ಅವರೇ ಸ್ಕ್ರೀನಿಂಗ್ ಮಾಡಿ, ಜಾತಕ ಹೊರತೆಗೆದು,

ನಮ್ಮನ್ನು "ಬಹೆನ್ ಜೀ, ಕಿಟಕಿಯಿಂದ ನೋಡಿ! ಇವರು ನಿಮಗೆ ಗೊತ್ತೇ? ಇವರನ್ನು ಬರಲು ಬಿಡುವುದೇ? ಎಂದು ಕೇಳಿದ ಮೇಲೇ ಬಂದವರಿಗೆ ಮನೆಯೊಳಗೆ ಕಾಲಿಡಲು ಸಾಧ್ಯ!

ಈ ಬಡಾವಣೆಯ ಗಲ್ಲಿಗಳಲ್ಲಿ, ರಸ್ತೆಗಳಲ್ಲಿ ಇದ್ದವರು – ಬಹಳಷ್ಟು ಜನ. ಸಣ್ಣ ಅಪರಾಧ ಮಾಡಿದವರು, ಜೈಲು ಮುಖ ನೋಡಿದ ಬಡತನದ ರೇಖೆಯ ಕೆಳಗಿನವರು. ಆದರೆ ನಮ್ಮ ಬಗ್ಗೆ ಇದ್ದ ವಿಶ್ವಾಸ, ನಂಬಿಕೆ, ಸೌಹಾರ್ದತೆ, ಪ್ರೀತಿಗಳಿಗೆ ಕೊರತೆ ಇರಲಿಲ್ಲ. ನಮಗೂ ಅಷ್ಟೇ!



ಈ ರೀತಿಯಿದ್ದ ಮನುಷ್ಯ–ಮನುಷ್ಯನ ಮಧ್ಯದ ಒಡಂಬಡಿಕೆ ಯಾವಾಗ ಬದಲಾಯಿತೋ ತಿಳಿಯದು! ಆದರೆ ಸಂಕೀರ್ಣವಾಗಿರುವ ಕುಟುಂಬ ವ್ಯವಸ್ಥೆಯಲ್ಲೂ ಇದು ಹೆಚ್ಚಾಗಿದೆ. ಇಂತಹ ಬದಲಾವಣೆ ನಮಗೇ ಸೀಮಿತವಲ್ಲ, ದೇಶದ ಪರಿಸ್ಥಿತಿಯೂ ಹೌದು! ಇದೆಲ್ಲಾ ಇಂದಿನ ಪ್ರಜಾವಾಣಿ ಮತ್ತು ದೀಪಾವಳಿ ಸಂಚಿಕೆ ಓದಿ, ಮನಸ್ಸಿನಲ್ಲಿ ಬಂದ ಕೆಲ ನೆನಪುಗಳು!

**ಎಸ್.ರಾಜಲಕ್ಷ್ಮಿ**
**9845371961**

## ಮನೋರಂಜನೆಗಾಗಿ ಗಣಿತ

ಪ್ರಶ್ನೆಗಳು: (1) ನಾನು ಹೋದ ವಾರ 4 ಸೇಬು ಮತ್ತು 6 ಕಿತ್ತಳೆ ಹಣ್ಣುಗಳನ್ನು ಕೊಂಡೆನು. ಅದರ ಒಟ್ಟು ಬೆಲೆ ರೂ.236/– ಆಯಿತು. ಇಂದು 5 ಸೇಬು ಮತ್ತು 10 ಕಿತ್ತಳೆ ಹಣ್ಣುಗಳನ್ನು ಕೊಂಡಾಗ ಒಟ್ಟು ಬೆಲೆ ರೂ.340/– ಆಯಿತು. ಹಾಗಾದರೆ, ಪ್ರತಿ ಸೇಬಿನ ಬೆಲೆ ಮತ್ತು ಪ್ರತಿ ಕಿತ್ತಳೆಯ ಬೆಲೆ ಕಂಡು ಹಿಡಿಯಿರಿ.

(2) 2 ರಿಂದ 5 ರ ವರೆಗೆ ಯಾವುದೇ ಸಂಖ್ಯೆಯಿಂದ ಭಾಗಿಸಿದರೂ ಶೇಷ 1 ಉಳಿಯುವ ಅತಿ ಕಡಿಮೆಯಾದ ಎರಡು ಅಂಕೆಯ ಸಂಖ್ಯೆಯನ್ನು ಕಂಡು ಹಿಡಿಯಿರಿ.

(3) ಈಗ ಒಬ್ಬ ತಂದೆಯ ವಯಸ್ಸು ಅವನ ಮಗನ ವಯಸ್ಸಿನ ಮೂರರಷ್ಟಿದೆ. ಹತ್ತು ವರ್ಷಗಳ ಹಿಂದೆ ತಂದೆಯ ವಯಸ್ಸು ಮಗನ ವಯಸ್ಸಿನ ಏಳರಷ್ಟಿದ್ದರೆ, ತಂದೆ ಮತ್ತು ಮಗನ ಈಗಿನ ವಯಸ್ಸನ್ನು ಕಂಡು ಹಿಡಿಯಿರಿ.

(4) ರಾಜೇಶನು ಒಬ್ಬ ಕ್ರಿಕೆಟ್ ಆಟಗಾರ. ಅವನು ಆಡಿದ 6 ಇನ್ನಿಂಗ್ಸುಗಳ ಸರಾಸರಿ ಓಟಗಳು 60. ಅವನು ಇಂದಿನ ಮ್ಯಾಚಿನಲ್ಲಿ ಎರಡು ಇನ್ನಿಂಗ್ಸುಗಳನ್ನು ಆಡಿ ಮೊದಲನೆಯ ಇನ್ನಿಂಗ್ಸಿಗಿಂತಲೂ ಎರಡನೆಯ ಇನ್ನಿಂಗ್ಸಿನಲ್ಲಿ 10 ರನ್ ಹೆಚ್ಚು ಗಳಿಸಿದನು. ಈ ಎರಡು ಇನ್ನಿಂಗ್ಸ್ ನಂತರ ಅವನ ಸರಾಸರಿ ಓಟ 65 ಆದರೆ, ಅವನು ತನ್ನ ಕಡೆಯ ಎರಡು ಇನ್ನಿಂಗ್ಸ್‌ಗಳಲ್ಲಿ ಎಷ್ಟೆಷ್ಟು ಓಟಗಳನ್ನು ಗಳಿಸಿದನು?

(5) ಒಂದು ಪಾರ್ಕಿನಲ್ಲಿ ಕೆಲವು ಮರಗಳಿವೆ. ಕೆಲವು ಹಕ್ಕಿಗಳು ಅಲ್ಲಿಗೆ ಹಾರಿ ಬರುತ್ತವೆ. ಪ್ರತಿ ಮರದ ಮೇಲೆ ಒಂದು ಹಕ್ಕಿ ಕುಳಿತುಕೊಂಡರೆ ಒಂದು ಹಕ್ಕಿ ಉಳಿಯುತ್ತದೆ. ಪ್ರತಿ ಮರದ ಮೇಲೆ ಎರಡು ಹಕ್ಕಿಯಂತೆ ಕುಳಿತುಕೊಂಡರೆ, ಒಂದು ಮರ ಉಳಿದು ಕೊಳ್ಳುತ್ತದೆ. ಹಾಗಿದ್ದರೆ, ಅಲ್ಲಿರುವ ಮರಗಳ ಸಂಖ್ಯೆ ಮತ್ತು ಹಕ್ಕಿಗಳ ಸಂಖ್ಯೆ ಕಂಡು ಹಿಡಿಯಿರಿ.

**ನಿಮ್ಮ ಉತ್ತರಗಳಲ್ಲಿ:**
5 ಸರಿ ಇದ್ದರೆ – ಅತ್ಯುತ್ತಮ
3–4 ಸರಿ ಇದ್ದರೆ – ಉತ್ತಮ
1–2 ಸರಿ ಇದ್ದರೆ – ಮಧ್ಯಮ
ಒಂದೂ ಸರಿ ಇಲ್ಲದಿದ್ದರೆ – ಹೆಚ್ಚಿನ ಅಭ್ಯಾಸದ ಅಗತ್ಯವಿದೆ.

**ಉತ್ತರ:** (1) ಸೇಬಿನ ಬೆಲೆ 32 ರುಪಾಯಿ ಮತ್ತು ಕಿತ್ತಳೆಯ ಬೆಲೆ 18 ರೂಪಾಯಿ, (2) 61, (3) ತಂದೆ ಮತ್ತು ಮಗನ ಈಗಿನ ವಯಸ್ಸು ಕ್ರಮವಾಗಿ 45 ಮತ್ತು 15,
(4) 75 ಮತ್ತು 85, (5). 3 ಮರ ಮತ್ತು 4 ಹಕ್ಕಿ



**ಬಿ.ಈ. ಗೋವಿಂದ್**
**91677 62948**

# ಭಗವದ್ಗೀತೆಯ ಸಾಂಖ್ಯಯೋಗ ಅಧ್ಯಾಯದ ಸಾರಾಂಶ



ಭಗವದ್ಗೀತೆಯಿಂದ ನಾವು ಕಲಿಯಬಹುದಾದದ್ದು ಅಪಾರವಾಗಿದೆ. ಗೀತೆಯ ಎರಡನೇ ಅಧ್ಯಾಯ ಎಲ್ಲಾ ಅಧ್ಯಾಯಗಳಿಗಿಂತ ಹೆಚ್ಚಿನ ಮಹತ್ವದ್ದಾಗಿದೆ. ಈ ಅಧ್ಯಾಯ ಸಾಂಖ್ಯ ಯೋಗದ ವಿವರಣೆಯನ್ನು ಒಳಗೊಂಡಿದೆ. ಇಡೀ ಭಗವದ್ಗೀತೆಯ ಸಾರ ಇದರಲ್ಲೇ ಅಡಕವಾಗಿದೆ ಎಂದರೂ ಅತಿಶಯೋಕ್ತಿಯಲ್ಲ ಎಂಬುದು ಬಲ್ಲವರ ಅಭಿಪ್ರಾಯ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಹೇಗೆ ತಮ್ಮ ದುಃಖಗಳಿಗೆ ಕಾರಣವಾಗುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮತ್ತೆ ಮನಃಶಾಂತಿಗೋಸ್ಕರ ಹೇಗೆ ಸ್ಥಿತಪ್ರಜ್ಞನಾಗಿರಬೇಕು ಎಂಬುದರ ಬಗ್ಗೆಯೂ ಉಪಾಯಗಳನ್ನು ಸೂಚಿಸಲಾಗಿದೆ. ಅರಿಷಡ್ವರ್ಗಗಳನ್ನು ಸಂಪೂರ್ಣವಾಗಿ ಜಯಿಸುವುದು ನಮ್ಮಂತಹ ಹುಲು ಮಾನವರಿಗೆ ಸಾಧ್ಯವಿಲ್ಲದ ಮಾತು. ಅದನ್ನು ಸಾಧಿಸಬೇಕಾದಲ್ಲಿ ಸಂಸಾರವನ್ನು ತ್ಯಜಿಸಿ ಸನ್ಯಾಸ ಭಾವ ಬರಬೇಕು. ಇನ್ನು ಆ ಸ್ಥಿತಪ್ರಜ್ಞೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಿಶ್ಚಿತವಾಗಿಯೂ ಮನಃಶಾಂತಿಯನ್ನು ಪಡೆಯಬಹುದು. ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣ ನೀಡಿದ ಉತ್ತರ – ಸ್ಥಿತ ಪ್ರಜ್ಞನಾದವನು ಮನಸ್ಸಿನ ನಾನಾ ಬಗೆಯ ಬಯಕೆಗಳಿಗೆ ತನಗೆ ದೊರಕಿದಲ್ಲಿಯೇ ಸಂತೃಪ್ತಿಯನ್ನು ಕಂಡುಕೊಳ್ಳುತ್ತಾನೆ. ಸುಖ–ದುಃಖಗಳನ್ನು ಸಮಾನವಾಗಿ ಪರಿಗಣಿಸುತ್ತಾನೆ. ಬದುಕಿನಲ್ಲಿ ದುಃಖ ಎದುರಾದಾಗ ಉದ್ವೇಗಗೊಳ್ಳುವುದಿಲ್ಲ ಮತ್ತು ಸುಖ ಪ್ರಾಪ್ತಿಗಾಗಿ ಸಂಭ್ರಮ ಪಡುವುದಿಲ್ಲ. ಅವನು ಸಾಂಸಾರಿಕ ಬಂಧನಗಳಿಂದಲೂ, ಭಯಕ್ರೋಧಗಳಿಂದಲೂ ಮುಕ್ತನು. ಜೀವನದಲ್ಲಿ ಎದುರಾಗುವ ಶುಭ–ಅಶುಭ, ಮಾನ–ಅಪಮಾನ, ಸೋಲು–ಗೆಲುವು, ಲಾಭ–ನಷ್ಟ ಇತ್ಯಾದಿಗಳನ್ನು ಸಮಾನ ಭಾವದಿಂದ ಸ್ವೀಕರಿಸುವ ಪಂಚೇಂದ್ರಿಯಗಳು ಬೇಕು, ಎನ್ನುವ ವಿಷಯ ಸುಖಗಳ ಆಸೆಗೆ ಒಳಗಾಗದೆ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾನೆ. ಈ ಎಲ್ಲಾ ಗುಣಗಳನ್ನು ರೂಢಿಸಿಕೊಳ್ಳಲು ಅಪೇಕ್ಷಿಸುವವನು ನನ್ನನ್ನೇ ಪರಮಾತ್ಮನೆಂದು ಪರಿಗಣಿಸಿ, ಇಂದ್ರಿಯ, ಮನಸ್ಸು, ಬುದ್ದಿಗಳನ್ನು ನನ್ನಲ್ಲೇ ಕೇಂದ್ರೀಕರಿಸಬೇಕು ಎಂದು ಭಗವಾನ್ ಶ್ರೀಕೃಷ್ಣನು ಕೊನೆಯಲ್ಲಿ ಹೇಳುತ್ತಾನೆ. ಒಟ್ಟಿನಲ್ಲಿ ಸಾಧಿಸುವ ಗುರಿಯತ್ತ ಸತತವಾದ ಮನೋನಿಗ್ರಹ, ಏಕಾಗ್ರತೆ ಅವಶ್ಯ ಎಂಬುದು ರೂಪಿಸುತ್ತದೆ. ಸತತ ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತದೆ.



**ಸಂಧ್ಯಾ ನಾಗರಾಜ್**
**9980224796**

ಓಂ ತತ್ಸತ್.

## ಹೊಸ ಸದಸ್ಯರು

ಎಸ್.ರಾಜಲಕ್ಷ್ಮಿ
ಧೃವ
ಜ್ಯೋತ್ಸ್ನ ಶ್ಯಾಮ್
ಅಪೇಕ್ಷಿತ್ ಕೃಷ್ಣ
ಸವಿತಾ ಪ್ರಸಾದ್ ಆರ್.ಎ.
ಪ್ರದೀಪ್ ಕುಮಾರ್ ಶ್ರೀನಿವಾಸನ್
ಚಂದ್ರಶೇಖರ್ ಎಸ್.
ಎಸ್.ಎನ್.ಅನುರಾಧ

## ಹೊಸ ಪೋಷಕರು

ಸ್ವಾತಿ ಶೇಖರ್ ಆನಂದ್

ಸಂಘವು ಹೊಸ ಸದಸ್ಯರನ್ನು/ಪೋಷಕರನ್ನು ಸ್ವಾಗತಿಸುತ್ತದೆ.

## ವಿದ್ಯಾನಿಧಿಗೆ ದೇಣಿಗೆ ನೀಡಿದ ಸದಸ್ಯರು

ಈಶ್ವರನ್ ಎ.
ನಾಗರತ್ನಮ್ಮ ಡಿ.ಸಿ.
ಶೇಖರ್ ಕೆ.ಸಿ.
ಮಣಿ ವಿ.ಎಸ್.
ನರೇಂದ್ರ ಆರ್.
ಉಮಾ ಜಯರಾಮನ್
ಗುರು ಪ್ರಸನ್ನ ಜಿ.

## ಸಾಮಾನ್ಯ ನಿಧಿಗೆ ದೇಣಿಗೆ ನೀಡಿದ ಸದಸ್ಯರು

ಗೋವಿಂದ ಪ್ರಸಾದ್ ಬಿ.ಎನ್.

# ಗಿರಿಜಾ ಕಲ್ಯಾಣ ಅನ್ನ ಸಂತರ್ಪಣೆಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಹಿತೈಷಿಗಳು

ಮುರಳಿ ಎ.
ವೆಂಕಟೇಶ್ ಎ.
ಸುಬ್ರಹ್ಮಣ್ಯಂ ಬಿ.
ಗಿರಿಜಾದೇವಿ ಎಂ.
ಪದ್ಮನಾಭನ್ ಆರ್.ಎಸ್.
ಶಾಂತಾ ವೆಂಕಟೇಶ್
ವೆಂಕಟೇಶ ಪ್ರಸಾದ್ ಆರ್.
ಸೂರ್ಯಪ್ರಕಾಶ್ ಎನ್.ವಿ.
ರವಿ ಕಿರಣ್ ಎಚ್.ಕೆ.
ಶಶಿಧರ್ ಎಚ್.ಕೆ.
ಜಗದೀಶ್ ಸುಬ್ಬರಾಮಯ್ಯ
ಶ್ರೀನಿವಾಸ ಕೆ.ಜಿ.
ಬಾಲಸುಬ್ರಮಣಿ ಎಸ್.
ಸಂಧ್ಯಾ ನಾಗರಾಜ್
ನಾಗರಾಜ್ ಕೆ.ಟಿ.
ಸೇತುರಾಮ್ ಬಿ.ಆರ್.
ಶಂಕರ ಪ್ರಸಾದ್ ಬಿ.ಆರ್.
ಸರಸ್ವತಿ ಬಿ.ಪಿ.
ಬದರಿನಾರಾಯಣ ಎಚ್.ಆರ್.
ವಿದ್ಯಾ ಮೂರ್ತಿ
ಶೇಖರ್ ಕೆ.ಸಿ.
ಸಂಧ್ಯಾ ಬಿ.ಇ.
ಚಂದ್ರಶೇಖರಯ್ಯ ಎನ್.
ಶ್ಯಾಮ ಸುಂದರ್ ಬಿ.ಎಸ್.
ಸುಮಾ ಗೋಪಾಲ್
ಉಮಾ
ಹೇಮಚಂದರ್ ಎಂ.ಎನ್.
ಈಶ್ವರನ್ ಎ.
ಬಾಲಸುಬ್ರಮ್ಹಣ್ಯ ಜಿ.ವಿ.
ಶ್ಯಾಮಸುಂದರ್ ಆರ್.ಎ.

ಅಶ್ವತ್ಥ್ ಎನ್.
ಮುತ್ತುಸ್ವಾಮಿ ಜಿ.
ಸರಸ್ವತಿ ಎಚ್.ಕೆ.
ಶಶಿಕಲಾ ಪಿ.
ಜ್ಯೋತಿ ಸೂರ್ಯನಾರಾಯಣ
ರೇವತಿ ಸಿ.
ವೆಂಕಟೇಶ್ ಎಲ್.
ರಮೇಶ್ ಬಿ.ಇ.
ಶರ್ಮಾ ಕೆ.ಬಿ.ಎಸ್.
ಗೋಪಾಲಸ್ವಾಮಿ ಎಚ್.
ಸುನಂದಾ ರತನ್
ರಮೇಶ್ ಎನ್.ವಿ.
ರಾಜಲಕ್ಷ್ಮಿ ಆರ್.
ಸುಮನ್ ಜಿ.ಕೃಷ್ಣ
ಗೋವಿಂದ್ ಬಿ.ಇ.
ರಾಧಾ ರಾಧಾಕೃಷ್ಣನ್
ಮಧುಸೂಧನ್ ಕೆ.ಎಸ್.
ಲಕ್ಷ್ಮಿದೇವಿ ಜಿ.ಪಿ.
ಭಾನುಪ್ರಕಾಶ್ ಎಸ್.ಎಲ್.
ಉಮಾಶಂಕರ್ ಆರ್.ಪಿ.
ರಮೇಶ್ ಆರ್.
ಸೋಮಸುಂದರ ಎಸ್.
ಮಂಜುಳಾ ನಾರಾಯಣರಾವ್
ಗುಂಡಪ್ಪ ಕೆ.
ಸತ್ಯನಾರಾಯಣ ಎಸ್.
ಶ್ರೀನಿವಾಸ್ ಆರ್.ಎ.
ಬಾಲಸುಬ್ರಹ್ಮಣ್ಯಂ ಎಸ್.ಆರ್.
ವಸಂತ ಬಿ.ಪಿ.
ನರೇಂದ್ರ ವಿ.
ಗೋವಿಂದರಾಜು ಡಿ.ಎಸ್.
ಸೀತಾಲಕ್ಷ್ಮಿ ಬಿ.ಇ.

ನಾಗರತ್ನ ಬಿ.ಇ.
ಶ್ರೀನಿವಾಸ ಎಸ್.ಸಿ.
ರಾಘವ ಪ್ರಸಾದ್ ಎಸ್.ಸಿ.
ನಾಗರಾಜನ್ ಎಸ್.
ವೈಜಯಂತಿ
ಕರ್ನಲ್ ರಾಜನ್ ವಿ.ಜಿ.
ನಾಗರಾಜ್ ಎಚ್.ಎಸ್.
ನಂದ ಕುಮಾರ್ ಎಚ್.ಕೆ.
ಸೂರ್ಯನಾರಾಯಣ ಬಿ.ಎಸ್.
ಆತ್ರೇಶ್ ಎಸ್.
ಪದ್ಮನಾಭನ್
ರಮೇಶ್ ಆರ್.ಎಸ್.
ವಿಜಯದೇವ್ ಎಸ್.
ಸರೋಜಾ ಕೆ.ಎಲ್.
ಉಮಾ ಎನ್.ಗೋವಿಂದ್
ಬಾಲಸುಬ್ರಹ್ಮಣ್ಯ ಕೆ.
ತ್ಯಾಗರಾಜನ್ ಎಸ್.
ಶ್ರೀಧರ ಮೂರ್ತಿ ಬಿ.ಪಿ.
ಗಣೇಶ್ ಶ್ರೀಧರ್ ಆರ್.
ಅನಂತಕುಮಾರ್ ಕೆ.ಬಿ.
ಪರಮೇಶ್ವರ್ ಎಚ್.ಎಸ್.
ಮಾಧವ್ ಎಸ್.
ಚಂದ್ರಮೌಳಿ ಆರ್.
ಸುರೇಶ್ ಬಿ.ಇ.
ಕೃಷ್ಣನ್ ಟಿ.ಎಸ್. ಮತ್ತು ಕುಟುಂಬ
ಡಾ॥ ರಮಾದೇವಿ ಎಸ್.
ಸತ್ಯಪ್ರಸಾದ್ ಎಸ್.ಆರ್.
ರವಿಕುಮಾರ್ ಎಸ್.
ಅರುಣ್ ವಿ.
ನಟರಾಜನ್ ಕೆ.ಸಿ.

## ಗಿರಿಜಾ ಕಲ್ಯಾಣ ಅನ್ನ ಸಂತರ್ಪಣೆಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಹಿತೈಷಿಗಳು

ಉಮೇಶ್ ಎಸ್.
ವಿಶ್ವನಾಥ್ ಎನ್.
ಪ್ರಕೃತಿ ದೇವಿ
ಮಣಿ ವಿ.ಎಸ್.
ಶ್ರೀನಿವಾಸ ಎ.ವಿ.
ಮಂಜುನಾಥ್ ಆರ್.ಎನ್.
ಶಾಂತಾ ಆರ್.ಎನ್.
ಶ್ರೀನಿವಾಸ ಮೂರ್ತಿ ವಿ.
ವೆಂಕಟೇಶ್ ಆರ್.ಎಸ್.
ಗಾಯತ್ರಿ ದೇವಿ

ನರೇಂದ್ರ ಆರ್.
ರಮಾದೇವಿ ಕೆ.ಆರ್.
ಗಾಯತ್ರಿ ಸುಧೀಂದ್ರ
ಶ್ರೀಕಂಠ ಅಯ್ಯರ್
ವಿಜಯ್ ಶ್ರೀನಿವಾಸ
ಸೂರ್ಯ ಪ್ರಕಾಶ್ ಬಿ.ಎ.
ಸತೀಶ ಬಿ.ಎಸ್.
ಸರಸ್ವತಿ ಕೆ.
ಉಮಾ ಜಯರಾಮನ್
ಚಂದ್ರಶೇಖರ್ ಕೆ.

ವಸುಂಧರ
ಗಣೇಶನ್ ಎನ್.
ಮಾಧವ್ ಸಿ.ಎಸ್.
ಗುರು ಪ್ರಸನ್ನ ಜಿ.
ನಿರ್ಮಲಾ ಸುಧೀಂದ್ರ
ನಾಗರಾಜ್ ಕೆ.ಜಿ.
ಭರತ್ ವಿಜಯಕೃಷ್ಣ
ಸತ್ಯಮೂರ್ತಿ ಎಸ್.ಎ.
ಶಾಂತಾ ಕೆ.ಎಲ್.

---

## ಗಿರಿಜಾ ಕಲ್ಯಾಣಕ್ಕೆ ಸಂಕಲ್ಪಿಸಿದ ಸದಸ್ಯರು ಮತ್ತು ಹಿತೈಷಿಗಳು

ವಿಶ್ವನಾಥ್ ಎನ್.
ಉಮೇಶ್ ಎಸ್.
ವೆಂಕಟೇಶ್ ಆರ್.ಎಸ್.
ಸುಬ್ಬಲಕ್ಷ್ಮಿ ಬಿ.ಕೆ.
ಗುರುಪ್ರಸಾದ್ ಆರ್.ಎಸ್.
ಪದ್ಮನಾಭನ್ ಆರ್.ಎಸ್.
ಗಣೇಶ್ ಎಚ್.ಡಿ.
ನಾಗರತ್ನ
ಸೂರ್ಯಪ್ರಕಾಶ್ ಎನ್.ವಿ.
ರವಿ ಕಿರಣ್ ಎಚ್.ಕೆ.
ಶಶಿಧರ್ ಎಚ್.ಕೆ.
ಸಂಧ್ಯಾ ನಾಗರಾಜ್
ಶೇಖರ್ ಕೆ.ಸಿ.
ಚಂದ್ರಶೇಖರಯ್ಯ ಎನ್.
ರಾಜೇಶ್ವರಿ ಆರ್.
ಯೋಗೀಶ್ ಬಿ.ಇ.
ನಟರಾಜ ಬಿ.ಸಿ.
ಸುಮಾ ಗೋಪಾಲ್

ಉಮಾ
ಹೇಮಾ ಕೀರ್ತಿ ಚಂದ್ರ
ಕುಮಾರ್ ಸಿ.
ಸುಬ್ಬರಾವ್ ವಿ.
ಈಶ್ವರನ್ ಎ.
ಮಾನಸ ಎಸ್.
ಮನೋಜ್ ಎಸ್.
ನಿರ್ಮಲಾ ಸುಧೀಂದ್ರ
ಶ್ರೀಕಾಂತ್ ಆರ್.ಎ.
ಮಂಜುನಾಥ ಕೆ
ಅಶ್ವತ್ಥನಾರಾಯಣ ಎಚ್.ಜಿ.
ಶ್ರೀನಿವಾಸ ಎಚ್.ಪಿ.
ಉಮೇಶ್ ಕುಮಾರ್ ಜಿ.
ಭಗವಾನ್ ಆರ್.
ಸದಾನಂದ ಹೆಚ್.ಕೆ.
ಗೋವಿಂದ ಪ್ರಸಾದ್ ಬಿ.ಎನ್.

ರವಿಶಂಕರ್ ಆರ್.ಪಿ.
ಶಶಿಕಲಾ ಪಿ.
ಜ್ಯೋತಿ ಸೂರ್ಯನಾರಾಯಣ
ತಾರಾ ರವೀಂದ್ರ
ರೂಪ ವಿಶ್ವೇಶ್
ಲತಾ ಎಸ್.ಆರ್.
ರಮಾ ಸುಬ್ಬರಾವ್
ಸತ್ಯನಾರಾಯಣ ಎಂ.ಆರ್.
ಅನಂತಕುಮಾರ್ ಕೆ.ಬಿ.
ಗೋಪಾಲಸ್ವಾಮಿ ಎಚ್.
ಸುನಂದಾ ರತನ್
ರಮೇಶ್ ಎನ್.ವಿ.
ಕುಮಾರ್ ಆರ್.ಎನ್.
ಡಾ॥ ಸುಮಾ ಪಿ.ಸರಾಫ್
ವೆಂಕಟ ಸುಬ್ಬರಾವ್ ಆರ್.ಎನ್.

## ಗಿರಿಜಾ ಕಲ್ಯಾಣಕ್ಕೆ ಸಂಕಲ್ಪಿಸಿದ ಸದಸ್ಯರು ಮತ್ತು ಹಿತೈಷಿಗಳು

ವಾಸು ಎಸ್.
ರಾಮಕೃಷ್ಣ ವಿ.
ರಮೇಶ್ ಟಿ.ಎಸ್.
ಸುಜಾತಾ ಶ್ರೀನಿವಾಸ
ನಾಗೇಶ
ನಯನ ಕುಮಾರ್ ಎಸ್.
ಶ್ರೀನಿವಾಸ ಎನ್.
ಶ್ರೀಧರ್ ಸಿ.
ಸ್ವಾಮಿನಾಥನ್ ಆರ್.ಎನ್.
ರಘುಕುಮಾರ್ ಜಿ.
ಸೂರ್ಯನಾರಾಯಣ ಟಿ.ಪಿ.
ಗೋಪಾಲಕೃಷ್ಣ ಆರ್.
ಶ್ರೀನಿವಾಸ್ ಆರ್.ಎ.
ಶ್ರೀನಿವಾಸನ್ ಎ.ವಿ.
ಡಾ|| ಸ್ವಾಮಿನಾಥ್ ಜಿ.
ಕರ್ನಲ್ ರಾಜನ್ ವಿ.ಜಿ.
ಹನುಮಂತನ್ ಕೆ.
ನಾಗರಾಜ್ ಹೆಚ್.ಎಸ್.
ನಂದ ಕುಮಾರ್ ಎಚ್.ಕೆ.
ಮಹೇಶ್ ಆರ್.ಎಸ್.
ಗುರು ಪ್ರಸನ್ನ ಜಿ.
ಸುಂದರನ್ ಪಿ.
ಕುಮಾರ್ ಬಿ.ಸಿ.
ಅಟ್ಟೂರು ರಾಮಕೃಷ್ಣ ಶರ್ಮ
ಶ್ರೀನಿವಾಸಯ್ಯ ಎಸ್.
ರಮೇಶ್ ಆರ್.ಎಸ್.
ದೀಪ್ತಿ ಆರ್.
ವೆಂಕಟೇಶ್ ಜಿ.ಎಸ್.
ಅನಿಲ್ ಜಿ.
ರಮಾ ರಾಘವೇಂದ್ರ
ಗಣೇಶ್ ಶ್ರೀಧರ್ ಆರ್.
ಮಂಜುನಾರಾಯಣ ಕೆ.
ಶಿವರಾಮ ಕೆ.
ಮಾಧವನ್ ಎಸ್.
ಸುಶ್ಮಿತಾ ಕೃಷ್ಣ
ಚಂದ್ರಶೇಖರ್ ಎಸ್.
ರಘುನಂದನ ಎಸ್.
ಕೃಪಾ ಹರೀಶ್
ಅರುಣ್ ವಿ.
ಅರುಣ್ ಕೆ.ಎಸ್.
ಅನಿಲ್
ವೆಂಕಟೇಶ್ ಜಿ.
ಕೃಷ್ಣಸ್ವಾಮಿ ಛಾಯಾಪತಿ
ಸತ್ಯಮೂರ್ತಿ ಜಿ.ಎಸ್.
ಶ್ರೀಕಂಠೇಶ್ವರನ್ ಕೆ.
ಸಂಧ್ಯಾ ವಿ.
ಕಾರ್ತಿಕ್
ಕೌಶಿಕ್
ಉಮಾಶಂಕರ್ ಆರ್.ಪಿ.
ಸುನಂದಾ ಗೋವಿಂದರಾಜು
ನಿರಂಜನ್ ಎಸ್.
ಸುಧಾ ವಿ.
ಗೋವಿಂದ್ ಬಿ.ಇ.
ವೆಂಕಟಸುಬ್ಬಯ್ಯ ಕೆ.

## ವಾರ್ಷಿಕ ನಿರ್ವಹಣಾ ವೆಚ್ಚ ನೀಡಿದ ಸದಸ್ಯರು

ಗಿರಿಜಾದೇವಿ ಎಂ.
ಸುಮಾ ಗೋಪಾಲ್
ಉಮಾ
ಅಶ್ವತ್ಥ್ ಎನ್.
ಶ್ರೀನಿವಾಸ್ ಆರ್.ಎ.
ಭ್ರಮರಾ ಗೋಪಿನಾಥ್
ವಿಶ್ವಾಸ್ ಆರ್.ಹೆಚ್.
ಪ್ರಕೃತಿ ದೇವಿ
ನಾಗರತ್ನಮ್ಮ ಡಿ.ಸಿ.
ಶ್ರೀನಿವಾಸನ್ ಎ.ವಿ.
ಕೃಷ್ಣಸ್ವಾಮಿ ಛಾಯಾಪತಿ
ಶೇಷಾದ್ರಿ
ಶ್ರೀನಿವಾಸ ಮೂರ್ತಿ ವಿ.
ಭಾನುಮತಿ ಎಸ್.
ವಿನಾಯಕ ವಿ.
ಸುಬ್ರಹ್ಮಣ್ಯಂ ವಿ.
ಉಮಾ ಜಯರಾಮನ್
ಅಟ್ಟೂರು ರಾಮಕೃಷ್ಣ ಶರ್ಮ
ರಘು ಟಿ.ಎನ್.

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ – ಸಂಘದಿಂದ ಕಿರುಕಾಣಿಕೆ



## ವಿವಾಹ



ಸಂಘದ ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್‌ರವರ ಸೋದರ, ಸದಸ್ಯ ಶ್ರೀ ಹೆಚ್.ಕೆ. ರವಿಕಿರಣ್ ಮತ್ತು ಶ್ರೀಮತಿ ಗಂಗಾರವರ ಪುತ್ರಿ ಚಿ.ಮಾಳವಿಕರವರ ವಿವಾಹವು ಶ್ರೀಮತಿ ಪೂರ್ಣಿಮಾ ಆರ್. ಕುಲಕರ್ಣಿ ಮತ್ತು ಶ್ರೀ ರಾಜರತನ್ ಕುಲಕರ್ಣಿರವರ ಪುತ್ರ ಚಿ. ಸಮೀರ್‌ರವರೊಂದಿಗೆ ದಿನಾಂಕ 18.12.2022ರಂದು ಬೆಂಗಳೂರಿನಲ್ಲಿ ನೆರವೇರಿತು.

## ಅಭಿನಂದನೆಗಳು



ಸಂಘದ ಸದಸ್ಯ ಶ್ರೀ ಶಿವಕುಮಾರ್ ನಟರಾಜನ್ ಮತ್ತು ಸದಸ್ಯೆ ಶ್ರೀಮತಿ ಮಮತಾ ಶಿವಕುಮಾರ್‌ರವರ ಪ್ರಥಮ ಪುತ್ರ ಚಿ. ಸಮಾಹಿತರವರು ಬೆಂಗಳೂರು ಬುಡೋಕನ್ ಕರಾಟೆ ಮತ್ತು ಮಾರ್ಷಲ್ ಆರ್ಟ್ಸ್ ಟ್ರಸ್ಟ್ ಆಯೋಜಿಸಿದ್ದ (ಹದಿನೈದು–ಹದಿನಾರು ವರ್ಷದ) ಹನ್ನೊಂದನೆಯ ರಾಜ್ಯ ಮಟ್ಟದ ಇಂಟರ್ಡೋಜೋ ಕರಾಟೆ ಛಾಂಪಿಯನ್ ಶಿಪ್ "ಕಲರ್ ಬೆಲ್ಟ್" ವಿಭಾಗದಲ್ಲಿ ದ್ವಿತೀಯ ಪ್ರಶಸ್ತಿ ಮತ್ತು "ವೈಯುಕ್ತಿಕ ಕಾಟಾ" ವಿಭಾಗದಲ್ಲೂ ದ್ವಿತೀಯ ಪ್ರಶಸ್ತಿ ಪಡೆದಿರುತ್ತಾರೆ.



ಸಂಘದ ಸದಸ್ಯ ಶ್ರೀ ಶಿವಕುಮಾರ್ ನಟರಾಜನ್ ಮತ್ತು ಸದಸ್ಯೆ ಮಮತಾ ಶಿವಕುಮಾರ್‌ರವರ ದ್ವಿತೀಯ ಪುತ್ರ ಚಿ. ಸಮರ್ಥರವರು ಬೆಂಗಳೂರು ಬುಡೋಕನ್ ಕರಾಟೆ ಮತ್ತು ಮಾರ್ಷಲ್ ಆರ್ಟ್ಸ್ ಟ್ರಸ್ಟ್ ಆಯೋಜಿಸಿದ್ದ ಹನ್ನೊಂದನೆಯ ರಾಜ್ಯ ಮಟ್ಟದ ಇಂಟರ್ಡೋಜೋ ಕರಾಟೆ ಛಾಂಪಿಯನ್ ಶಿಪ್ "ಕಲರ್ ಬೆಲ್ಟ್" ವಿಭಾಗದಲ್ಲಿ ತೃತೀಯ ಪ್ರಶಸ್ತಿಯನ್ನು ಪಡೆದಿದ್ದಾರೆ.



ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಅರುಣ್ ಮತ್ತು ಶ್ರೀಮತಿ ವಿನುತಾ ಅರುಣ್ ಪುತ್ರ ಚಿ. ಕೆ.ಎ. ವೈಭವ್‌ರವರು ಇನ್ಸ್‌ಟಿಟ್ಯೂಟ್ ಆಫ್ ಕರಾಟೆ ಮತ್ತು ಅಲೀಡ್ ಆರ್ಟ್ಸ್, ಕೊಡವೂರ್, ಆಯೋಜಿಸಿದ್ದ 40ನೇ ಬಿ.ಕೆ.ಐ. ನ್ಯಾಷನಲ್ ಕರಾಟೆ ಛಾಂಪಿಯನ್‌ಶಿಪ್–2022 ವೈಯುಕ್ತಿಕ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ.

**ಪುಟಾಣಿ ಕರಾಟೆ ಕಲಿಗಳಿಗೆ ಸಂಘದ ಅಭಿನಂದನೆಗಳು**

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, 'BRUHACHARANA SANGHA', No. 27/1, Bull Temple Road, Basavanagudi, Bengaluru - 560 004.
Printed at Hamsanikethan Printers, No. 126, C.T. Bed, 6th Cross Rd, Banashankari Stage II, Banashankari, Bengaluru, Karnataka 560070